ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 ಸಂಚಿಕೆ 22 ಮೇ 31, 1981 ಬೆಲೆ : 60 ಪೈಸೆ

ಮಹಿಳೆಯರ ಮೇಲಿನ ಶೋಷಣೆ

ಮಧ್ಯಪ್ರದೇಶದ ರಾಜ್ಯಪಾಲರ ಮಗಳನ್ನು ಮತ್ತು ರಾಜಸ್ಥಾನದ ಮಂತ್ರಿಯೊಬ್ಬರ ಇಬ್ಬರು ಪುತ್ರಿಯರನ್ನು ಬಾಲ್ಯವಿವಾಹಮಾಡಿದ ವರದಿಯಾಗಿದೆ. ಬಾಲ್ಯವಿವಾಹದ ವಿರುದ್ಧ ಕಾನೂನು ಇದ್ದರೂ, ಬಾಲ್ಯವಿವಾಹವು ಭಾರತ ದೇಶದಲ್ಲಿ ಇನ್ನೂ ಬಹಳಷ್ಟು ನಡೆಯುತ್ತಿದೆ. ಕಾನೂನು ಮಾಡಿರುವ ಸರಕಾರದ ಉನ್ನತಸ್ಥಾನಗಳನ್ನು ಅಲಂಕರಿಸಿರುವವರೇ ಕಾನೂನನ್ನು ದೂರವಿರಿಸಿ ಬಾಲ್ಯವಿವಾಹ ಮಾಡಿಸುವುದು ಅಕ್ಷಮ್ಯ ಅಪರಾಧ.

ಬಾಲ್ಯವಿವಾಹವು ಪಾಳೆಯಗಾರಿ ಪದ್ಧತಿಯ ಅವಶೇಷ. ಬಾಲ್ಯವಿವಾಹದಿಂದ ದೈಹಿಕವಾಗಿಯೂ, ಮಾನಸಿಕವಾಗಿಯೂ ಕಷ್ಟಕ್ಕೆ ಒಳಗಾಗುವುದು ಮಹಿಳೆ. ಮಹಿಳೆಯರು ಎಲ್ಲಾ ರೀತಿಯ ಅಸಮಾನತೆ, ಶೋಷಣೆಗಳಿಗೆ ತುತ್ತಾಗಿರುವ ನಮ್ಮ ಸಮಾಜದಲ್ಲಿ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಕ್ಕೆ ಮಿತಿಇಲ್ಲ. ಮಹಿಳೆಯರ ಮಾನಭಂಗ, ಮಹಿಳೆಯರನ್ನು ಮಾರಾಟಮಾಡುವುದು, ವರದಕ್ಷಿಣೆಯಂಥ ಪದ್ಧತಿ ಮೂಲಕ ಮಹಿಳೆಯನ್ನು ಶೋಷಿಸುವುದು, ಸಮಾನ ಕೆಲಸಮಾಡಿದರೂ ಮಹಿಳೆಯರಿಗೆ ಪುರುಷರಿಗಿಂತ ಕಡಮೆ ವೇತನಕೊಡುವುದು-ಇತ್ಯಾದಿ ಅವಿರತವಾಗಿ ನಡೆದು ಬಂದಿದೆ.

ಮಹಿಳೆಯರ ರಕ್ಷಣೆಗಾಗಿ ಮತ್ತು ಅವರ ಅನುಕೂಲಕ್ಕಾಗಿ ವರದಕ್ಷಿಣೆ ವಿರೋಧದ ಕಾಯ್ದೆ, ಬಾಲ್ಯವಿವಾಹ ನಿಷೇಧಕಾಯ್ದೆ-ಹೀಗೆ ಕೆಲವೊಂದು ಕಾನೂನುಗಳು ಇವೆ. ಆದರೆ ಕಾನೂನುಗಳನ್ನು ಮಾಡಿದ

ಸಂಪಾದಕೀಯ

ಸರಕಾರ ಅವನ್ನು ಜಾರಿಗೊಳಿಸುವುದಕ್ಕೆ ಮುಂದಾಗಿಲ್ಲ; ಬದಲು ಕಾನೂನಿಗೆ ವಿರೋಧವಾಗಿ ಕಾನೂನು ರಚಿಸಿದವರೇ ಅನುಸರಿಸುತ್ತಿದ್ದಾರೆ. ಹೆಚ್ಚಿನ ಮಹಿಳೆಯರಿಗೆ ತಮ್ಮ ಮೇಲಿನ ಶೋಷಣೆಯ ಬಗ್ಗೆ ಮತ್ತು ತಮಗಾಗಿ ರಚಿತವಾದ ಕಾನೂನುಗಳ ಬಗ್ಗೆ ಅರಿವಿಲ್ಲ. ದೇಶದ ಪ್ರಧಾನಿ ಮಹಿಳೆ ಆಗಿರುವ ಭಾರತ ದೇಶದಲ್ಲಿನ ಚಿತ್ರ ಇದು!

ತಮ್ಮ ಮೇಲಿನ ಶೋಷಣೆಯ ಬಗ್ಗೆ ಅರಿವು ಮೂಡಿಸಿ, ಈಗಾಗಲೇ ಜಾರಿಯಲ್ಲಿರುವ ಕಾನೂನುಗಳ ಬಗ್ಗೆ ತಿಳುವಳಿಕೆ ಕೊಟ್ಟು ಸಂಘಟಿತ ಪ್ರಜಾಸತ್ತಾತ್ಮಕ ಹೋರಾಟಗಳ ಮೂಲಕ ಮಹಿಳೆಯರು ಕಾನೂನುಗಳ ಲಾಭ ಪಡೆಯಬೇಕಾಗಿದೆ. ಇನ್ನೂ ಹೆಚ್ಚಿನ ಅನುಕೂಲ ಮತ್ತು ಮಹಿಳೆಯರ ಶೋಷಣೆ ತಡೆಯುವ ಕಾನೂನುಗಳಿಗಾಗಿ ಹೋರಾಡಬೇಕಾಗಿದೆ. ಮಹಿಳೆಯರ ಶೋಷಣೆಗೆ ಮೂಲ ಕಾರಣವಾಗಿರುವ ಪುರುಷ ಪ್ರಧಾನ ವ್ಯವಸ್ಥೆಯ ವಿರುದ್ಧ ಹೋರಾಡಿ ಸಮಾನತೆಗಾಗಿ ಶ್ರಮಿಸಬೇಕಾಗಿದೆ. ಮಹಿಳೆಯರು ತಮ್ಮ ಮೇಲಿನ ಶೋಷಣೆಯ ವಿರುದ್ಧ ಹೋರಾಡುವುದರೊಂದಿಗೆ, ಇತರೆಲ್ಲಾ ಪ್ರಜಾಪ್ರಭುತ್ವ ಚಳುವಳಿ ಮತ್ತು ಕ್ರಾಂತಿಕಾರಿ ಹೋರಾಟಗಳೊಂದಿಗೆ ತಮ್ಮನ್ನು ಸೇರಿಸಿಕೊಂಡು, ಇಂದಿನ ಶೋಷಣಾ ವ್ಯವಸ್ಥೆಯನ್ನೇ ಬದಲಾಯಿಸಬೇಕಾಗಿದೆ. ಎಲ್ಲಾ ರೀತಿಯ ಆರ್ಥಿಕ-ಸಾಮಾಜಿಕ ಸಮಾನತೆ ದೊರೆಯಬೇಕಾದರೆ ಸಮಾಜವಾದ ವ್ಯವಸ್ಥೆಯತ್ತ ಮುನ್ನಡೆಯಲು ಮಹಿಳೆಯರು ಹೋರಾಡಬೇಕು. ಜೂನ್ 1, 2 ಮತ್ತು 3 ರಂದು ಬೆಂಗಳೂರಲ್ಲಿ ನಡೆಯಲಿರುವ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಪ್ರಥಮ ರಾಜ್ಯ ಸಮಾವೇಶವು ಈ ದಿಸೆಯಲ್ಲಿ ಒಂದು ಮಹತ್ವ ಹೆಜ್ಜೆಯಾಗಲಿ.

ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಮುಷ್ಕರ

ಕೇಂದ್ರದ ಮೊಂಡು ಧೋರಣೆ

ದೀರ್ಘಕಾಲ ಕಳೆದರೂ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಮುಷ್ಕರ ಇತ್ಯರ್ಥವಾಗಿಲ್ಲ. 77ದಿನಗಳ ವಿರೋಚಿತ ಹೋರಾಟದ ನಂತರ ಇತ್ತೀಚಿನ ಬೆಳವಣಿಗೆಗಳನ್ನು ಗಮನಿಸಿದರೆ ಕೇಂದ್ರ ಸರಕಾರ ಈ ಮುಷ್ಕರ ಕುರಿತು ಮೊಂಡು ಧೋರಣೆ ಅನುಸರಿಸುತ್ತಿರುವುದು ಸ್ಪಷ್ಟವಾಗಿ ಕಂಡು ಬರುತ್ತಿದೆ. ಆಡಳಿತ ವರ್ಗಗಳೊಡನೆ ಅನೇಕ ಸುತ್ತಿನ ಮಾತುಕತೆಗಳ ನಂತರವೂ ಸಮಸ್ಯೆ ಬಗೆಹರಿದಿಲ್ಲ.

ಕಳೆದ 6ರಿಂದ ಈ ಕೈಗಾರಿಕೆಗಳಲ್ಲಿ ಘೋಷಿಸಿರುವ ಲಾಕೌಟ್ ಮುಂದುವರಿಯುತ್ತಿದೆ. ಕಾರ್ಮಿಕರ ಸ್ಥಿತಿಯಂತೂ ಭೀಕರವಾಗಿದೆ. ಶೈಕ್ಷಣಿಕ ವರ್ಷಪ್ರಾರಂಭವಾಗಿರುವದರಿಂದ ಈ ಕಾರ್ಮಿಕರ ಸಾವಿರಾರು ಮಕ್ಕಳ ಭವಿಷ್ಯ ಅಂಧಕಾರಮಯವಾಗಿದೆ. ಲಾಕ್‌ಔಟ್‌ನಿಂದಾಗಿ ದಿನನಿತ್ಯ ಲಕ್ಷಾಂತರ ರೂ.ಗಳು ನಷ್ಟವಾಗುತ್ತಿದೆ. ಉತ್ಪಾದನೆ ಸ್ಥಗಿತವಾಗಿದೆ. ಸರಕಾರ ಕಣ್ಣು ಮುಚ್ಚಿ ಕುಳಿತಿದೆ. ಕಾರ್ಮಿಕರ ನ್ಯಾಯಯುತ ಬೇಡಿಕೆಗಳ ಬಗ್ಗೆಯಂತೂ ದಿವ್ಯ ನಿರ್ಲಕ್ಷ ತೋರಿಸುತ್ತಿದೆ. ಸ್ಟೀಫನ್‌ರಂತಹ, ಗುಂಡೂರಾಯರಂತಹ ಮೂರ್ಖರು, ಕಾರ್ಮಿಕ ದ್ರೋಹಿಗಳು ಇರುವ, ಇಂದಿರಾ ಗಾಂಧಿಯವರಂತಹ ಮಹಾತಾಯಿಯ (!) ನೇತೃತ್ವ ಪಡೆದಿರುವ ಕಾಂಗೈನಿಂದ ನ್ಯಾಯ ನಿರೀಕ್ಷಿಸುವುದು ಮೂರ್ಖತನ ಎಂದು ಕಾರ್ಮಿಕರು ಮನಗಾಣತೊಡಗಿದ್ದಾರೆ.

ಮೇ 8ರಂದು ಲೋಕಸಭೆಯಲ್ಲಿ ಸಾರ್ವಜನಿಕ ಕ್ಷೇತ್ರದ ಪರಿಸ್ಥಿತಿ ಕುರಿತು ಸ್ಟೀಫನ್ ಮಾತನಾಡುತ್ತಾ, ಪರಿಹಾರ ಕಂಡುಹಿಡಿಯುವ ಆಶ್ವಾಸನೆ ಕೊಟ್ಟಿದ್ದರು. ಲೋಕಸಭೆಯಿಂದ ಹೊರಬಂದೊಡನೆ ಈ ಆಶ್ವಾಸನೆಯನ್ನು ಮರೆತುಬಿಟ್ಟಿದ್ದಾರೆ. ದಿ. 26,27ರಂದು ಬೆಂಗಳೂರಿನಲ್ಲಿ ಸ್ಟೀಫನ್‌ರ ಸಮಕ್ಷಮದಲ್ಲಿ ನಡೆದ ಮಾತುಕತೆಗಳೂ ಫಲಪ್ರದವಾಗಿಲ್ಲ.

ಈ ಮಧ್ಯೆ ಈ ಕಾರ್ಮಿಕರ ಬಹಿರಂಗ ಸಭೆಗಳಿಗೆ ಅನುಮತಿ ಕೊಡುತ್ತಿಲ್ಲ. ಕಾರ್ಮಿಕರ ಮಧ್ಯೆ ಸಂಪರ್ಕ ಏರ್ಪಡದಂತೆ, ಚರ್ಚೆ ನಡೆಯದಂತೆ ಮಾಡಲು ಪೋಲೀಸ ಕಮೀಷನರ್ ಬೆಂಗಳೂರಿನಲ್ಲಿ ಸೆ. 144 ಹೇರಿದ್ದಾರೆ. ಇತ್ತೀಚಿಗೆ ಎನ್.ಜಿ.ಓ. ಹಾಲ್‌ನಲ್ಲಿ ನಡೆಯಲಿದ್ದ ಮೀಟಿಂಗಿಗೂ ತೊಂದರೆ ಮಾಡಿದರು. ಜೆ. ಎ.ಎಫ್. ನಾಯಕರನ್ನು ಕಾಡುಗೋಡಿಯಲ್ಲಿ ನಡೆದ ಸಭೆಯನ್ನುದ್ದೇಶಿಸಿ ಮಾತನಾಡಿದ್ದಕ್ಕೆ ಬಂಧಿಸಲಾಯಿತು. ಈ ಪ್ರಜಾಸತ್ತಾತ್ಮಕ ವಿರೋಧಿ ಕ್ರಮವನ್ನು ಎಲ್ಲ ಸಾಮೂಹಿಕ ಸಂಘಟನೆಗಳೂ ಖಂಡಿಸಿವೆ.

ಬಂಧನವನ್ನು ಉಗ್ರವಾಗಿ ಖಂಡಿಸಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್‌ರು ಸರಕಾರ ತನ್ನ ಧೋರಣೆಯನ್ನು ಬದಲಿಸದಿದ್ದಲ್ಲಿ ರಾಜ್ಯವ್ಯಾಪಿ ಹೋರಾಟ ರೂಪಿಸಬೇಕಾದೀತೆಂದು ಎಚ್ಚರಿಸಿದ್ದಾರೆ.

ಮನೆಗೆ ಮರಳಲು ಇಚ್ಛಿಸಿದ ನಾಯಕ

ಕಾಂಗ್ರೆಸ್ (ಯು)ಗೆ ಚವ್ಹಾಣ್ ರಾಜೀನಾಮೆ

ನಿರೀಕ್ಷಿಸಿದಂತೆ ಕಾಂಗ್ಯೂನ ರಾಷ್ಟ್ರ ನಾಯಕ ವೈ. ಬಿ. ಚವಾಣ್ "ಮರಳಿ ಮನೆ" ಸೇರಲಿದ್ದಾರೆ. ಸೇರುವ ಮುನ್ನ ಸಾಕಷ್ಟು ದೊಂಬರಾಟವನ್ನೂ ಆಡಿದ್ದಾರೆ. ಸಮರ್ಥನೀಯ (ಅವರ ದೃಷ್ಟಿಯಲ್ಲಿ) ಕಾರಣಗಳನ್ನೂ ತೋರಿಸಿದ್ದಾರೆ.

ಈ ನಾಯಕರು ಅಧಿಕಾರವಿಲ್ಲದೇ ಪರಿತಪಿಸುತ್ತಿದ್ದರು. ಏಕೆಂದರೆ ಅಧಿಕಾರದಲ್ಲಿ ಇಲ್ಲದಿರುವುದು ಈ ನಾಯಕಮಣಿಗಳಿಗೆ ತುಂಬ ಕಷ್ಟದ ಮಾತು. ಚವಾಣ್‌ರನ್ನು ಮಾಜೀ ಸ್ಪೀಕರ್ ಬಲಿರಾಂ ಭಗತ್‌ರೂ, ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಕೆಲವರು ಹಿಂಬಾಲಿಸಿದ್ದಾರೆ. ಸಂಕಷ್ಟದಲ್ಲಿರುವ ರಾಷ್ಟ್ರಕ್ಕೆ ಕಾಂಗ್ರೆಸ್‌ಗಳ ವಿಲೀನ ತುಂಬ ಅಗತ್ಯವಿದೆಯಂತೆ. ಕೇವಲ ಬೂಟಾಟಿಕೆ! ರೊಟ್ಟಿಗಾಗಿ ಹಸಿದಿರುವ...ಯಂತೆ ಸಂದರ್ಭಕಾಯುತ್ತಿದ್ದ ಭ್ರಷ್ಟರು ರಾಷ್ಟ್ರದ ಬಗ್ಗೆ ಮಾತನಾಡುತ್ತಿರುವುದು ತಮಾಷೆಯಾಗಿದೆ.

ಚವಾಣ್ ಮುಂತಾದವರು ತಾವು ಪ್ರತಿನಿಧಿಸುತ್ತಿದ್ದ ಕ್ಷೇತ್ರದ ಜನತೆಗೆ ವಿಶ್ವಾಸದ್ರೋಹ ಬಗೆದಿದ್ದಾರೆ. ಸ್ಥೈರ್ಯವಿದ್ದರೆ ಬಹುಗುಣರ (ರಾಜೀನಾಮೆಕೊಟ್ಟು)ನ್ನು ಅನುಸರಿಸಬೇಕಿತ್ತು. ಈ ಭ್ರಷ್ಟರಿಂದ ನಾವಿದನ್ನು ನಿರೀಕ್ಷಿಸುವುದೂ ತಪ್ಪೇ. ಕೆಲವೇ ದಿನಗಳಲ್ಲಿ ಮತ್ತೆ ಕೆಲವರು ಚವಾಣ್‌ರನ್ನು ಅನುಸರಿಸಲಿದ್ದಾರಂತೆ. ಯಾರಾರೆಂಬುದು ಕೆಲವೇ ದಿನಗಳಲ್ಲಿ ಗೊತ್ತಾಗಬಹುದು.

ಇದ್ದುದರಲ್ಲಿ ಕರ್ನಾಟಕ ಪ್ರದೇಶ ಕಾಂಗ್ಯೂ ವಿಲೀನ ಕುರಿತು ಚವಾಣ್‌ರ ವಿಚಾರಧಾರೆಯನ್ನು ಒಪ್ಪಿಲ್ಲ. ಉನ್ನಿಕೃಷ್ಣನ್, ಪ್ರಿಯರಂಜನ್ ದಾಸ್ ಮುನ್ಷಿ, ತಾರಕೇಶ್ವರಿ ಸಿನ್ಹಾ ಮೊದಲಾದವರು ಭದ್ರವಾಗಿ ನಿಂತಿದ್ದಾರೆ. ಕಾಂಗ್ಯೂ ಅಧ್ಯಕ್ಷ ಶ್ರೀ ದೇವರಾಜ ಅರಸ್, ಕೇರಳದ ಶ್ರೀ ಅಂತೋಣಿ ಮೊದಲಾದವರು ವಿಲೀನದ ವಿಚಾರವನ್ನು ಕಟುವಾಗಿ ಟೀಕಿಸಿರುವುದು ಇದ್ದುದರಲ್ಲೇ ಸಮಾಧಾನಕರ.

ಬಲ ಅಥವಾ ಎಡ ಈ ಯಾವುದೇ ಸಿದ್ಧಾಂತಗಳಿಗೆ ಅಂಟಿಕೊಳ್ಳದಿದ್ದ, ಅಧಿಕಾರ ಮಾತ್ರವನ್ನು ಗುರಿಯಾಗಿಟ್ಟುಕೊಂಡಿದ್ದ ಚವಾಣ್‌ರಂತವರು ತಮಗೆ ಸರಿಯಾದ ಸ್ಥಳಕ್ಕೇ ಹೋಗಲಿದ್ದಾರೆ. ಕಾಂಗ್ಯೂ ಸ್ಥಾಪನೆಯಾಗಿದ್ದು ಇಂದಿರಾ ಕಾರ್ಯವೈಖರಿ ಕುರಿತು ಭಿನ್ನಾಭಿಪ್ರಾಯವಿದ್ದುದರಿಂದಲೇ. ಆಗ ಕಾಂಗ್ಯೂ ನಾಯಕರಾಗಿದ್ದ ಚವಾಣರು ಎಲ್ಲ ವೇದಿಕೆಗಳಿಂದ ಇಂದಿರಾರ ಸರ್ವಾಧಿಕಾರಿ ಧೋರಣೆಗಳನ್ನೂ, ಸರಕಾರದ ಆಡಳಿತ ವೈಖರಿಯನ್ನೂ ಬಲವಾಗಿ ಟೀಕಿಸುತ್ತಿದ್ದರು. ಇದೇ ಮನುಷ್ಯ ಅದೇ (ಎಳ್ಳಷ್ಟೂ ಬದಲಾಗದ) ಇಂದಿರಾರನ್ನು ಸೇರಲಿದ್ದಾರೆ.

ಪ್ರತಿಪಕ್ಷಗಳನ್ನು ಬಲಹೀನಗೊಳಿಸಲು ಇಂದಿರಾ ಯತ್ನಿಸುತ್ತಿದ್ದಾರೆ. ತಮಗೆ ಮತ್ತು ಭಾವೀ ನಾಯಕ ರಾಜೀವ್‌ಗೆ ನಿಷ್ಠರಾಗಬಹುದಾದ ವ್ಯಕ್ತಿಗಳನ್ನು ಸೆಳೆಯುತ್ತಿದ್ದಾರೆ. ಈ ಬೋನಿನಲ್ಲಿ ಚವಾಣರ ಪ್ರವೇಶವಾಗಿದೆ. ವಿರೋಧಿಗಳನ್ನು ಮಣ್ಣು ಮುಕ್ಕಿಸುವ ಇಂದಿರಾರ ಕೌಶಲ್ಯವನ್ನು ಚವಾಣರ ಪ್ರವೇಶ ಸಮರ್ಥಿಸಲಿದೆ.

ಕಳೆದ ದಶಕದ ಕೊನೆಯಿಂದ (1969) ಕಾಂಗ್ರೆಸ್ ಛಿದ್ರವಾಗುತ್ತಲೇ ಇದೆ. ಮುಂದೆ ಇಂದಿರಾಗಾಂಧಿ ತುರ್ತುಪರಿಸ್ಥಿತಿಯನ್ನು ಜಾರಿ ಮಾಡಿದ್ದು, ಜನತಂತ್ರರಂಗವನ್ನು ಹತ್ತಿಕ್ಕಿದ್ದು, ದಿನನಿತ್ಯ ದಬ್ಬಾಳಿಕೆ ಮುಂತಾ ದಘಟನೆಗಳು ಇತಿಹಾಸದಲ್ಲಿ ಸೇರಿಹೋಗಿವೆ. ತುರ್ತುಪರಿಸ್ಥಿತಿಯಲ್ಲಿ ದಬ್ಬಾಳಿಕೆಗೆ ಈಡಾದ ಭಾರತದ ಮತದಾರ ಇಂದಿರಾರ ಪಕ್ಷವನ್ನು ತ್ಯಾಗಿದು ಜನತಾಪಕ್ಷವನ್ನು ಒಲಿದ,

(ಕಡೇ ಪುಟ ನೋಡಿ)

ಸಂಕ್ಷಿಪ್ತ ಸಮಾಚಾರಗಳು:

ಚಿಕ್ಕಬಳ್ಳಾಪುರ

ಕಾರ್ಮಿಕ ಸಂಘಟನೆಗಳಲ್ಲಿ ಕಾಂಗ್ರೆ ಗೂಂಡಾಗಿರಿ ಪ್ರತಿಭಟಿಸಿ ನಡೆದ ವಾರಾಚರಣೆಯ ಅಂಗವಾಗಿ 17-5-81ರಂದು ಚಿಕ್ಕಬಳ್ಳಾಪುರದಲ್ಲಿ ಕಾರ್ಮಿಕರು, ಕೃಷಿಕಾರ್ಮಿಕರ, ಪಕ್ಷದ ಸದಸ್ಯರು ಕಾಂ. ಲಕ್ಷ್ಮಯ್ಯನವರ ನೇತೃತ್ವದಲ್ಲಿ ಬೃಹತ್ ಮೆರವಣಿಗೆ ಯನ್ನು ಏರ್ಪಡಿಸಿದ್ದರು. ನಂತರ ಪೋಲೀಸ್ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಬೀದರ್

11-5-81ರಂದು ಬೀದರ್‌ನಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಸಮಿತಿಯ ವತಿಯಿಂದ ಮುನ್ಸಿಪಲ್ ವಾಚನಾಲಯದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಸಭೆಗೆ ವಿಶೇಷವಾಗಿ ಯುವಕರು, ವಿದ್ಯಾರ್ಥಿಗಳು, ಕಾರ್ಮಿಕರು ದೊಡ್ಡ ಪ್ರಮಾಣದಲ್ಲಿ ಹಾಜರಿದ್ದರು.

ಮುಖ್ಯ ಭಾಷಣಕಾರರಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್‌ರು ಆಗಮಿಸಿದ್ದರು. ಸಭೆಯನ್ನುದ್ದೇಶಿಸಿ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಸಂಚಾಲಕ ಕಾಂ. ಶ್ರೀರಾಂರೆಡ್ಡಿ ಮಾತನಾಡಿದರು. ಕಾಂ. ಸುಂದರರಾಜ ಅಧ್ಯಕ್ಷತೆ ವಹಿಸಿದ್ದರು. ಕಾಂ. ಸಂಗ್ರಾಮ್ ಸ್ವಾಗತ ಭಾಷಣ ಮಾಡಿದರು. ಪ್ರಾರಂಭದಲ್ಲಿ ರಾಜೇಶ್ ಕ್ರಾಂತಿಗೀತೆ ಹಾಡಿದನು.

ಕೆ.ಜಿ.ಎಫ್.

17-5-81ರಂದು ಭಾರತ ಗೋಲ್ಡ ಮೈನ್ಸ್ ಎಂಪ್ಲಾಯೀಸ್ ಯುನಿಯನ್‌ನ ಕಾರ್ಯಕಾರೀ ಸಮಿತಿ ಸಭೆ ಸೇರಿತ್ತು. ಯೂನಿಯನ್‌ನ ಅಧ್ಯಕ್ಷ ಕಾಂ. ಎಸ್. ಸೂರ್ಯನಾರಾಯಣ ರಾವ್‌ರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಬೆಂಗಳೂರಿನ ಮೈಕೋ ಕಾರ್ಖಾನೆಯಲ್ಲಿ ಎಫ್. ಎಂ. ಖಾನ್ ನೇತೃತ್ವದ ಕಾಂಗ್ರೆ ಗೂಂಡಾಗಳು ನಡೆಸುತ್ತಿರುವ ಸಂವಿಧಾನಬಾಹಿರ ಕೃತ್ಯಗಳನ್ನು, ಪೋಲೀಸ ಕುಮ್ಮಕ್ಕು ಕೊಡುತ್ತಿರುವುದನ್ನು ಉಗ್ರವಾಗಿ ಖಂಡಿಸಲಾಯಿತು.

ಸಾರ್ವಜನಿಕ ಉದ್ದಿಮೆ ವಲಯಗಳ ಕಾರ್ಮಿಕರನ್ನು ಸಂಸ್ಪೆಂಡ್, ಡಿಸ್‌ಮಿಸ್ ಮಾಡುತ್ತಿರುವುದನ್ನು ಖಂಡಿಸಲಾಯಿತು.

ಮಂಗಳೂರು

ಮಂಗಳೂರಿನ ಸಿಟಿ ಮತ್ತು ಸರ್ವಿಸ್ ಬಸ್‌ಗಳಲ್ಲಿ ಕೆಲಸಮಾಡುವ ಡ್ರೈವರ್ಸ್ ಮತ್ತು ಕಂಡಕ್ಟರುಗಳ ಸಭೆಯೊಂದು 19-4-81ರಂದು ಮೋಟರ್ ಟ್ರಾನ್ಸ್‌ಪೋರ್ಟ್ ಮತ್ತು ಇಂಜಿನೀಯರಿಂಗ್ ವರ್ಕರ್ಸ್ ಯೂನಿಯನ್ನಿನ ಆಶ್ರಯದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ. ಪಿ. ರಾಮಚಂದ್ರ ರಾಯರು ವಹಿಸಿದ್ದರು. ಯೂನಿಯನ್‌ನ ಪ್ರಧಾನಕಾರ್ಯದರ್ಶಿ ಕಾಂ. ಕೆ. ಮುಸಬ್ಬರು ಮಾತನಾಡುತ್ತಾ ಸಿಟಿ ಬಸ್ ಡ್ರೈವರ್ಸ್ ಮತ್ತು ಕಂಡಕ್ಟರ್ಸ್ ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿದರು. ಕನಿಷ್ಠ ಸಂಬಳ ಕೊಡದೆ ಕಾನೂನು ಪ್ರಕಾರ ಕೊಡಬೇಕಾಗಿರುವ ಸವಲತ್ತುಗಳನ್ನು ಕೊಡದೇ ದಂಡಿಸುತ್ತಿರುವುದನ್ನು ವಿವರಿಸಿ ಈ ಸವಲತ್ತುಗಳನ್ನು ಪಡೆಯಲುಹೋರಾಟಕ್ಕೆ ಅಣಿಯಾಗಲು ಕರೆ ನೀಡಿದರು.

ಸಭೆಯಲ್ಲಿ ಚರ್ಚೆನಡೆದು ಈ ಕೆಳಕಂಡ ಕೇಳಿಕೆಗಳನ್ನು ಮಂಡಿಸಬೇಕೆಂದು ನಿರ್ಣಯಿಸಲಾಯಿತು.

ಡ್ರೈವರ್ಸ್‌ಗೆ ತಿಂಗಳಿಗೆ 500ರೂ. ಮತ್ತು ಕಂಡಕ್ಟರಿಗೆ 450ರೂ. ರೂ. 10ರಂತೆ ಭತ್ಯೆ ಸಿಗಬೇಕೆಂದೂ, 8 ಘಂಟೆಗಿಂತ ಹೆಚ್ಚಿಗೆ ಕೆಲಸಮಾಡಿದರೆ ಓವರ್ ಟೈಮ್ ಇತ್ಯಾದಿ ಸೌಲಭ್ಯ ಸಿಗಬೇಕೆಂದು, ಈ ಕೇಳಿಕೆಗಳನ್ನು ಪಡೆಯುವುದಕ್ಕೆ ಕಾರ್ಯಕ್ರಮ ರೂಪಿಸಲು 29 ಜನರ ಕ್ರಿಯಾಸಮಿತಿಯನ್ನು ರಚಿಸಲಾಯಿತು. ಜಿಲ್ಲೆಯಾದ್ಯಂತ ಕೆಲಸ ಮಾಡುತ್ತಿರುವ ಮೋಟಾರ್ ಟ್ರಾನ್ಸ್‌ಪೋರ್ಟ್ ಕಾರ್ಮಿಕರನ್ನು ಪ್ರಭಲವಾಗಿ ಸಂಘಟಿಸಲು ಅಧ್ಯಕ್ಷ ಸ್ಥಾನದಿಂದ ಕಾಂ. ಪಿ. ರಾಮಚಂದ್ರ ರಾಯರು ಕರೆ ನೀಡಿದರು.

ಬೆಳ್ತಂಗಡಿ

ದ. ಕ. ಜಿಲ್ಲೆಯ ಬೆಳ್ತಂಗಡಿಯಲ್ಲಿ 21-5-81ರಂದು ರಾಜ್ಯ ಬೀಡಿ ಫೆಡರೇಷನ್‌ನ ಕರೆಯ ಮೇರೆಗೆ ಬೆಳ್ತಂಗಡಿ ತಾಲ್ಲೂಕ ಬೀಡಿ ಕೆಲಸಗಾರರ ಸಂಘದ ನೇತೃತ್ವದಲ್ಲಿ ನೂರಾರು ಸ್ತ್ರೀ ಕಾರ್ಮಿಕರು ಸ್ಥಳೀಯ ದೀಪಕ್ ಎಂಟರ್‌ಪ್ರೈಸೆಸ್ ಮತ್ತು ಭಾರತ ಬೀಡಿ ವರ್ಕ್ಸ್‌ನ ಡಿಪೋಗಳೆದುರು ಸಾಯಂಕಾಲದವರೆಗೆ ಪಿಕೆಟಿಂಗ್ ನಡೆಸಿದರು.

ನಂತರ ನಡೆದ ಕಾರ್ಮಿಕರ ಸಭೆಯನ್ನು ಉದ್ದೇಶಿಸಿ ಸಂಘದ ಕಾರ್ಯದರ್ಶಿ ಕಾಂ. ವಿಷ್ಣುಮೂರ್ತಿ ಮಾತನಾಡಿದರು. ಪಿಕೆಟಿಂಗದ ನೇತೃತ್ವವನ್ನು ಕಾಂ. ಬಿ. ಮಾಧವ, ಸಂಜೀವ ಬಂಗೇರ, ಡೋಬಯ್ಯ, ಕಲ್ಯಾಣಿ, ಸುಂದರಿ ಮೊದಲಾದವರು ವಹಿಸಿದ್ದರು. ಕೊನೆಯಲ್ಲಿ ಕಾಂ. ಸಂಜೀವರು ಧನ್ಯವಾದವನ್ನಿತ್ತರು.

ಶಿವಮೊಗ್ಗ

ಶಿವಮೊಗ್ಗದ ಶ್ರೀ ಭವಾನಿ ರೈಸ್ ಮಿಲ್ ಮಾಲೀಕರು ಮಿಲ್‌ನಲ್ಲಿ ಕೆಲಸ ಮಾಡುತ್ತಿದ್ದ ಮಂಜುನಾಥ ಎಂಬ ಕಾರ್ಮಿಕನಿಗೆ ಕೊಡಬೇಕಿದ್ದ 1200 ರೂ. ಕೊಡದೇ ಡಿಸ್‌ಮಿಸ್ ಮಾಡಿದ್ದ. ಅಲ್ಲದೇ ಪೋಲೀಸರಿಗೆ ಸುಳ್ಳು ದೂರುಕೊಟ್ಟು ಬೆದರಿಕೆ ಹಾಕಿಸಿದ್ದರು. ಈ ಅನ್ಯಾಯವನ್ನು ಪ್ರತಿಭಟಿಸಿ 24-5-81ರಂದು ಸುಮಾರು 800 ಕಾರ್ಮಿಕರು ಬೃಹತ್ ಮೆರವಣಿಗೆ ಹೊರಡಿಸಿ ಭವಾನಿ ರೈಸ್‌ಮಿಲ್ ಎದುರು ಸತ್ಯಾಗ್ರಹ ಹೂಡಿದರು. ಅನಿವಾರ್ಯವಾಗಿ ಮಿಲ್ ಮಾಲೀಕರು ಮಂಜುನಾಥರಿಗೆ ಕೊಡಬೇಕಾದ ಹಣ ಚುಕ್ತಾ ಮಾಡಿದರು. ನಂತರ ನಡೆದ ಸಭೆಯನ್ನುದ್ದೇಶಿಸಿ ಕಾಂ. ತಿರುಕಪ್ಪ, ಚಂದೂಕುಟ್ಟಿ, ಶಿವಶಂಕರ, ಕಾಸೀಂಖಾನ್ ಮೊದಲಾದವರು ಮಾತನಾಡಿದರು.

ಶಿಡ್ಲಘಟ್ಟ

17-5-81ರಂದು ಶಿಡ್ಲಘಟ್ಟದಲ್ಲಿ ಕಾಂಗ್ರೆ ಗೂಂಡಾಗಿರಿ ಪ್ರತಿಭಟಿಸಿ ನಡೆದ ವಾರಾಚರಣೆಯ ಅಂಗವಾಗಿ ಕೋಲಾರ ಜಿಲ್ಲಾ ಜನರಲ್ ವರ್ಕರ್ಸ್ ಯುನಿಯನ್‌ನ ಶಿಡ್ಲಘಟ್ಟ ಶಾಖೆ ಆಶ್ರಯದಲ್ಲಿ ನೂರಾರು ಕಾರ್ಮಿಕರು ಮೆರವಣಿಗೆ ನಡೆಸಿದರು. ಸ್ಥಳೀಯ ಪೋಲೀಸ್ ಅಧಿಕಾರಿಗೆ ಮನವಿ ಸಲ್ಲಿಸಿ ಐಜಿಪಿಗೆ ರವಾನಿಸಲು ತಿಳಿಸಲಾಯಿತು. ○

ಭೂಮಾಲಕರಿಂದ ಗೂಂಡಾಗಿರಿ

ಕೊಡಗು ಜಿಲ್ಲೆಗೆ ಸೇರಿದ ಸುಂಟಿಕೊಪ್ಪದ ಭಾರೀ ಭೂಮಾಲಕ ಮನೆತನ ಪಟ್ಟಮನೆ ಪೊನ್ನಪ್ಪ ಎಂಬವರದು. ಈ ಮಹಾಶಯ ತಮ್ಮ ಭೂಮಿಯನ್ನು ಗೇಣಿಮಾಡಲಿಕ್ಕೆಂದು 30 ವರ್ಷಗಳ ಹಿಂದೆ ಸುಮಾರು 40 ಬಡಕುಟುಂಬಗಳಿಗೆ ನೀಡಿದ್ದರು. ಈ ಬಡಗೇಣಿದಾರ ಕುಟುಂಬದವರು ಭೂಮಿಯನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವಾಗಲೇ 2000 (ಎರಡು ಸಾವಿರ) ರೂ.ಗಳನ್ನು ಭೂ ಒಡೆಯರಿಗೆ ನೀಡಿದ್ದರು. ಅಲ್ಲದೇ ಪ್ರತಿ ವರ್ಷಕ್ಕೆ 100 ರೂ.ನಂತೆ ಪ್ರತಿ ಬಡಕುಟುಂಬವು ಗೇಣಿಬಾಡಿಗೆಯನ್ನು ನೀಡುತ್ತಿತ್ತು.



ಸರ್ಕಾರದ ಉಳುವವನೇಭೂಮಿಯ ಒಡೆಯ ಎಂಬ ಕಾನೂನು ಬಂದರೂ ಈ ಕುಟುಂಬಗಳು ಮಾತ್ರ ಗೇಣಿದಾರರಾಗಿಯೇ ಉಳಿದಿದ್ದರು. ಭೂಮಾಲಕರು ಮತ್ತು ಪೋಲೀಸರು ಸೇರಿ ಈ ಬಡಕುಟುಂಬಗಳನ್ನು ಭೂಮಿಯಿಂದ ಒಕ್ಕಲೆಬ್ಬಿಸಲು ದಬ್ಬಾಳಿಕೆಯ ನೀತಿಯನ್ನು ಅನುಸರಿಸಿದಾಗ ಈ ಬಡಕುಟುಂಬಗಳು, ರೈತಸಂಘವನ್ನು ಕಟ್ಟಿಕೊಂಡರು. ಭೂಮಾಲಕರ ದಬ್ಬಾಳಿಕೆ, ಸರಕಾರದ ದ್ವಿಮುಖ ನೀತಿಯ ವಿರುದ್ಧ ಅನವರತಹೋರಾಟ ಆರಂಭಿಸಿದರು.

ಈ ಹೋರಾಟವನ್ನು ಬಗ್ಗುಬಡಿಯಲು ಭೂಮಾಲೀಕ ಪೋಲೀಸರನ್ನು ಉಪಯೋಗಿಸಿ ಬಡಕುಟುಂಬಗಳ ಸುಳ್ಳು ಕೇಸ್‌ಗಳನ್ನು ದಾಖಲು ಮಾಡಿಸಿ ಕಿರುಕುಳ ಆರಂಭಿಸಿದ, ದೈಹಿಕ ದಾಳಿಯನ್ನು ಎಸಗಲು ಪ್ರಯತ್ನಿಸಿದ. ಈ ಕಿರುಕುಳದ ವಿರುದ್ಧ ಪೋಲೀಸರಿಗೆ ದೂರುಕೊಟ್ಟರೂ ನಿರರ್ಥಕವಾಯಿತು.

23-4-81ರಂದು ಭೂಮಾಲೀಕ ಮತ್ತವನ ಗೂಂಡಾಪಡೆ ಗೇಣಿದಾರರ ಮೇಲೆ ದಾಳಿ ನಡೆಸಿತು.

ರೈತಸಂಘದ ಸಕ್ರಿಯ ಸದಸ್ಯರಾದ ವೇಲಾಯುಧನ್, ಅಬ್ದುಲ್ಲಾ, ಶಶಿ, ರಾಮಕೃಷ್ಣ ಎಂಬುವರು ಈ ದಾಳಿಯಲ್ಲಿ ತೀವ್ರವಾಗಿ ಗಾಯಗೊಂಡರು.

ರೈತಸಂಘದ ಪ್ರತಿಭಟನೆ

ಈ ಹಲ್ಲೆಯನ್ನು ಸುಂಟಿಕೊಪ್ಪದ ರೈತಸಂಘವು ತೀವ್ರವಾಗಿ ಖಂಡಿಸಿದೆ. ಬಡಗೇಣಿದಾರರಿಗೆ ಸೂಕ್ತ ರಕ್ಷಣೆ ಕೊಡಬೇಕೆಂದು ಒತ್ತಾಯಿಸಿದೆ. ●

ಅಭ್ಯಾಸ ಶಿಬಿರ

ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಬೀದರ್ ಶಾಖೆಯು ಪರವಾಗಿ ಮೇ 8, 9 ಮತ್ತು 10 ರಂದು ಬೀದರ ನಗರದಿಂದ 15. ಕಿ. ಮಿ. ದೂರದಲ್ಲಿದ್ದ ಮೈಲಾರ (ಖಾನಾಪುರ)ಮಂದಿರದ ಆವರಣದಲ್ಲಿ ಅಭ್ಯಾಸ ಶಿಭಿರವನ್ನು ಏರ್ಪಡಿಸಲಾಗಿತ್ತು.

ಈ ಶಿಭಿರಕ್ಕೆ ಗುಲಬರ್ಗಾ, ರಾಯಚೂರ, ಸುರಪುರ, ಚಿಂಚೋಳಿ, ಬಳ್ಳಾರಿ, ಮಂಗಳೂರು, ಬೆಂಗಳೂರು ಮುಂತಾದ ಘಟಕಗಳಿಂದ 60 ಪ್ರತಿನಿಧಿಗಳು ಭಾಗವಹಿಸಿದ್ದರು.

ಈ ಶಿಭಿರಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್, ಪ್ರಾಂತರೈತ ಸಂಘದ ಪ್ರದಾನಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾವ್ ಮತ್ತು ಡಿ. ವೈ. ಓ. ಸಂಚಾಲಕ ಕಾಂ. ಶ್ರೀರಾಂರೆಡ್ಡಿ ಇವರುಗಳು ಉಪನ್ಯಾಸಕರಾಗಿ ಆಗಮಿಸಿದ್ದರು. ●

ಪುನರ್ನೇಮಕ

ಕೋಲಾರ ಜಿಲ್ಲೆಯ ಶಿಡ್ಲಘಟ್ಟದಲ್ಲಿನ ತೋಟಗಾರಿಕೆ ಇಲಾಖೆಯಲ್ಲಿ ಕಳೆದ 2 ವರ್ಷಗಳಿಂದ ಹಂಗಾಮಿ ದಿನಗೂಲಿಯ ಮೇಲೆ ಕೆಲಸ ಮಾಡುತ್ತಿದ್ದ ಶ್ರೀಮತಿ ಜಯಮ್ಮ, ಮುನಿರಾಜು, ಚಂದ್ರಪ್ಪ ಎಂಬುವರನ್ನು ವಿನಾಕಾರಣವಾಗಿ ದಿ. 1-5-81ರಿಂದ ಕೆಲಸದಿಂದ ವಜಾ ಮಾಡಲಾಗಿತ್ತು. ಯಾವುದೇ ನೋಟೀಸು ವಗೈರೆ ಸಹ ಕೊಟ್ಟಿರಲಿಲ್ಲ. ಸಮಾಚಾರ ತಿಳಿದ ಕಾರ್ಮಿಕ ಮುಖಂಡ ಕಾಂ. ಎನ್. ಮಣಿ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ಕಾಂ. ಜಿ. ದೊರೆಸ್ವಾಮಿ ಇವರುಗಳು 7-5-1981ರಂದು ತಾಲ್ಲೂಕು ತೋಟಗಾರಿಕೆ ಇಲಾಖೆಯ ಸಹಾಯಕ ಅಧಿಕಾರಿಗಳೊಡನೆ ಮಾತುಕತೆ ನಡೆಸಿ ವಜಾ ಆದ ಕಾರ್ಮಿಕರ ಪುನರ್ನೇಮಕಕ್ಕೆ ಒತ್ತಾಯಿಸಿದರು. ಒತ್ತಾಯಕ್ಕೆ ಮಣಿದ ಅಧಿಕಾರಿಯು ವಜಾ ಆದವರನ್ನು 8-5-81ರಿಂದ ಪುನರ್ನೇಮಕ ಮಾಡಿಕೊಂಡಿದ್ದಾರೆ. ○

ಸಂಘಟನೆ ಕುರಿತಂತೆ ಕೆಲವು ಪ್ರಶ್ನೆಗಳು

-ವಿ.ಜೆ.ಕೆ. ನಾಯರ್

ಕರ್ನಾಟಕ ರಾಜ್ಯ ಪ್ರಜಾಪ್ರಭುತ್ವವಾದಿ ಮಹಿಳೆಯರ ಸಂಘ (Democratic Women's Association)ದ ಪ್ರಥಮ ಸಮ್ಮೇಳನ ಜೂನ್ 1ರಿಂದ 3ರವರೆಗೆ ಬೆಂಗಳೂರಿನಲ್ಲಿ ಜರುಗಲಿದೆ. ಕೇಂದ್ರದಲ್ಲಿ ಸಂಘಟನೆಯ ಬಗ್ಗೆ ಯೋಜಿಸುವಾಗ ಕೆಲವು ವಿವಾದಗಳು ತಲೆಯೆತ್ತಿದ್ದವು. "ಸಾಮೂಹಿಕ ಸಂಘಟನೆಗಳನ್ನು ಕುರಿತು" ಎಂಬ ನಮ್ಮ ಪಕ್ಷದ ಕೇಂದ್ರಸಮಿತಿಯ ದಸ್ತಾವೇಜಿನಲ್ಲಿ ಈ ವಿವಾದಗಳನ್ನೆತ್ತಿಕೊಂಡು ಅವಕ್ಕೆ ಉತ್ತರಗಳನ್ನು ಕೊಡಲಾಗಿದೆ. ಈ ಹೊತ್ತಿಗೆ ಸಾರ್ವಜನಿಕ ಮಾರಾಟಕ್ಕಿದೆ. ಇದೇ ರೀತಿ DWAನ್ನು ಕರ್ನಾಟಕ ರಾಜ್ಯಮಟ್ಟದಲ್ಲಿ ಸಂಘಟಿಸುವಾಗಲೂ ಕೆಲವು ವಿವಾದಗಳು ತಲೆಯೆತ್ತಿವೆ. ಕೇಂದ್ರ ಸಮಿತಿಯ ದಸ್ತಾವೇಜಿನಲ್ಲಿ ಹೇಳಿರುವ ಧೋರಣೆಯನ್ನು ಪುನಃ ಪ್ರತಿಪಾದಿಸುವುದು ಮತ್ತು ಅದನ್ನು ನಮ್ಮ ರಾಜ್ಯಕ್ಕೆ ಅನ್ವಯಿಸುವಾಗ ಬಂದ ಸಂಶಯಗಳಿಗೆ ಸ್ಪಷ್ಟೀಕರಣ ನೀಡುವುದು ಈ ಲೇಖನದ ಉದ್ದೇಶ.

ವಿಶಾಲ ತಳಹದಿಯ ಸಂಘಟನೆಯಾಗಬೇಕು

ನಾವು ಶ್ರಮಜೀವಿ ಮಹಿಳೆಯರನ್ನು ಮಾತ್ರ ಸಂಘಟಿಸಬೇಕೆಂಬ ವಿಚಾರ ಸರಿಯಾದ್ದಲ್ಲವೆಂದು ಕೇಂದ್ರ ಸಮಿತಿ ಕಂಡುಕೊಂಡಿದೆ. ಎಲ್ಲಾ ವಿಭಾಗದ ಸ್ತ್ರೀಯರನ್ನು ಒಳಗೊಳ್ಳಲು ಸಾಧ್ಯವಾಗುವಷ್ಟು ಸಂಘಟನೆ ವಿಶಾಲವಾಗಿರಬೇಕು. ವಾಸ್ತವವಾಗಿ ಮಹಿಳೆಯರ ಸಂಘಟನೆಯಲ್ಲಿ ಕಾರ್ಖಾನೆಗಳು, ಕಚೇರಿಗಳು, ಗದ್ದೆಗಳಲ್ಲಿ ದುಡಿಯುವ ಮಹಿಳಾ ಕಾರ್ಮಿಕರು ಮಾತ್ರವಲ್ಲ ಗೃಹಿಣಿಯರು, ಮಧ್ಯಮ ಹಾಗೂ ಉಚ್ಚವರ್ಗದ ಮಹಿಳೆಯರೂ ಸೇರಿರಬೇಕು.

ಕ್ರಾಂತಿ ಯಶಸ್ವಿಯಾಗಬೇಕಾದರೆ ಶೋಷಕ ವ್ಯವಸ್ಥೆಯ ವಿರುದ್ಧ ಸಮರದಲ್ಲಿ ಹೆಚ್ಚೆಚ್ಚು ಜನಸಾಮಾನ್ಯರು ತಮ್ಮನ್ನು ಸಮರ್ಪಿಸಿಕೊಳ್ಳುವಂತಾಗಬೇಕೆಂಬುದೇ ಸಂಘಟನೆಯ ತಳಹದಿ ವಿಶಾಲವಾಗಿರಬೇಕೆಂಬುದರ ಹಿನ್ನೆಲೆಯಲ್ಲಿನ ವಿಚಾರ. ಒಂದು ಸಾಮೂಹಿಕ ಸಂಘಟನೆಗೆ ಈಗಾಗಲೇ ಪಕ್ಷಕ್ಕೆ ಪ್ರತಿಬದ್ಧರಾಗಿರುವವರು ಅಥವಾ ಸಮಾನಧೋರಣೆಯುಳ್ಳವರಿಗೆ ಮಾತ್ರ ಪ್ರವೇಶ ಸಿಗುವಂತಾದರೆ ಆ ಸಂಘಟನೆಯ ವ್ಯಾಪ್ತಿ ತೀರಾ ಸೀಮಿತವಾಗುವುದು ಅನಿವಾರ್ಯ. ಇಂತಹ ಧೋರಣೆಯಿಂದ ದೊಡ್ಡ ಜನವಿಭಾಗ ಇಂತಹ ಸಾಮೂಹಿಕ ಸಂಘಟನೆಯ ಹೊರಗೇ ಉಳಿಯುವಂತಾಗಿ ಒಂದು ನಿರ್ದಿಷ್ಟ ವರ್ಗ ಅಥವಾ ಗುಂಪನ್ನು ಸಂಘಟಿಸುವ ಉದ್ದೇಶವನ್ನು ಸಾಧಿಸಲಾಗುವುದಿಲ್ಲ. ತಮ್ಮ ಹಿತಾಸಕ್ತಿಗಳನ್ನು ಉತ್ಕರ್ಷಗೊಳಿಸುವುದಕ್ಕಾಗಿ ಒಂದು ಗುಂಪು ಅಥವಾ ವರ್ಗ ತಮ್ಮನ್ನು ತಾವೇ ಸಂಘಟಿಸಿಕೊಳ್ಳುವುದೇ ಒಂದು ಸಾಮೂಹಿಕ ಸಂಘಟನೆಯೆನಿಸುತ್ತದೆ. ಅದನ್ನು ಪಕ್ಷದ ಅಂಗ ಸಂಘಟನೆಯೆಂದು ಪರಿಗಣಿಸಬಾರದು.

ಆದ್ದರಿಂದ ಮಹಿಳೆಯರ ಸಂಘಟನೆ ಎಲ್ಲಾ ಮಹಿಳೆಯರನ್ನೂ ಒಳಗೊಂಡಿರಬೇಕು. ಅದು ಎಲ್ಲಾ ಮಹಿಳೆಯರನ್ನು ಯಾವ ಅಡ್ಡಿ-ಆತಂಕವೂ ಇಲ್ಲದೆ ಸಂಘಟಿಸಬೇಕು. ಇಂತಹ ಸಂಘಟನೆಯಲ್ಲಿ ದುಡಿಯುವ ಪಕ್ಷದ ಸದಸ್ಯರು ಅದರ ವಿಶಾಲ ಹಾಗೂ ಸ್ವತಂತ್ರ ಸ್ವರೂಪವನ್ನು ಕಾಪಾಡಿಕೊಳ್ಳಲು ಸತತವಾಗಿ ಪ್ರಯತ್ನಿಸಬೇಕು. ಅದೇ ಸಮಯವಲ್ಲಿ ತಮ್ಮ ಶಾಖೆಗಳ ಮೂಲಕ ಅವರು ಸಂಘಟನೆಯ ಪ್ರತಿಯೊಂದು ಗುಂಪಿನ ಸಂಕುಚಿತ ಪಂಥವಾದೀ ಧೋರಣೆಗಳಿಂದ ಸಂಘಟನೆಯನ್ನು ರಕ್ಷಿಸಬೇಕು. ಒಂದು ಸಾಮೂಹಿಕ ಸಂಘಟನೆಯನ್ನು ವಿಚ್ಛಿದ್ರಕಾರಿಗಳಿಂದ ರಕ್ಷಿಸುವುದೆಂದಾಗ ಪಂಥವಾದೀ ಹಾಗೂ ವಿಚ್ಛಿದ್ರಕಾರೀ ಭಾವನೆಗಳು, ಧೋರಣೆಗಳು ಹಾಗೂ ಕಾರ್ಯಕ್ರಮಗಳ ವಿರುದ್ಧ ಸತತವಾಗಿ ಸೈದ್ಧಾಂತಿಕ ಹೋರಾಟದಲ್ಲಿ ನಿರತವಾಗಿರುವುದರ ಅಗತ್ಯತೆಯೂ ಅದರಲ್ಲಿ ಸೇರಿಕೊಂಡಿದೆ. ಇಂತಹ ಭಾವನೆ, ಧೋರಣೆ ಹಾಗೂ ಕಾರ್ಯಕ್ರಮಗಳು ತನ್ನ ಪಕ್ಷದ ಒಳಗಿಂದಲೇ ಬರಲಿ, ಹೊರಗಿನಿಂದಲೇ ಬರಲಿ ಸೈದ್ಧಾಂತಿಕ ಹೋರಾಟ ನಡೆಸುವುದು ಅತ್ಯಗತ್ಯ. ತಪ್ಪು ವಿಚಾರಗಳು ತನ್ನ ಪಕ್ಷದ ಒಳಗಿಂದಲೇ ಹೊಮ್ಮುತ್ತಿದ್ದರೆ ಇಂತಹ ಹೋರಾಟವನ್ನು ಪಕ್ಷದೊಳಗೇ ಸೀಮಿತಗೊಳಿಸಬೇಕು. ತಪ್ಪು ವಿಚಾರಗಳು ಹೊರಗಡೆಯಿಂದ ತೂರಿಬರುತ್ತಿದ್ದರೆ, ತನ್ನ ಪಕ್ಷದ ಹೊರಗಿನಿಂದ ಆದರೆ ಸಂಘಟನೆಯ ಒಳಗಡೆಯಿಂದಲೇ ಭಂಗಬರುತ್ತಿದ್ದರೆ ಅದರ ವಿರುದ್ಧ ಪಕ್ಷದ ಸಹಾಯದಿಂದ ಸಂಘಟನೆಯೊಳಗೆ ಸಾಧ್ಯವಾದಷ್ಟು ವ್ಯಾಪಕ ಮಟ್ಟದಲ್ಲಿ ಸಾರ್ವಜನಿಕವಾಗಿಯೇ ಸಾಮೂಹಿಕ ಸಂಘಟನೆಯ ವ್ಯಾಪಕ ಸ್ವರೂಪ ಹಾಗೂ ಸರಿಯಾದ ಧ್ಯೇಯಗಳನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಹೋರಾಟ ನಡೆಸಬೇಕು. ಕರ್ನಾಟಕದಲ್ಲಿ ಮಹಿಳೆಯರ ಸಂಘಟನೆ ಸ್ಥಾಪಿಸುವಾಗ ನಾವು ನಮಗೆ ಮತ್ತು ಸಂಬಂಧಪಟ್ಟ ಜನಸಾಮಾನ್ಯರಿಗೆ ಈ ಕೆಳಗಿನ ಅಂಶಗಳನ್ನು ಸ್ಪಷ್ಟಪಡಿಸಿಕೊಳ್ಳಬೇಕು.

ದುಡಿಯುವ ಮಹಿಳೆಯರ ಸಮನ್ವಯ ಸಮಿತಿಗೂ AIDWA ಗೂ ಮಧ್ಯೆ ತಿಕ್ಕಾಟವಿಲ್ಲ

ಪ್ರಜಾಪ್ರಭುತ್ವವಾದಿ ಮಹಿಳಾ ಸಂಘಟನೆಯನ್ನು ಅಖಿಲ ಭಾರತ ಮಟ್ಟದಲ್ಲಿ ಸಂಘಟಿಸುವ ಮೊದಲು ಕೇರಳ, ತಮಿಳುನಾಡು, ಮಹಾರಾಷ್ಟ್ರ, ಆಂಧ್ರ ಇತ್ಯಾದಿ ಕಡೆಗಳಲ್ಲಿ ನಮ್ಮ ಪಕ್ಷದ ನಾಯಕತ್ವದಲ್ಲಿ ಮಹಿಳಾ ಸಂಘಟನೆಗಳಿದ್ದವು. ಈ ಸಂಘಟನೆಗಳಿದ್ದಂತೆಯೇ ಈ ರಾಜ್ಯಗಳಲ್ಲಿ ದುಡಿಯುವ ಮಹಿಳೆಯರ ಸಮ್ಮೇಳನಗಳು ನಡೆದವು ಹಾಗೂ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಗಳು ಚುನಾಯಿತವಾದವು. ದುಡಿಯುವ ಮಹಿಳೆಯರ ಸಮನ್ವಯ ಸಮಿತಿಗಳು ಸಿ.ಐ.ಟಿ.ಯು.ವಿನ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುತ್ತಿದ್ದವು.

ದುಡಿಯುವ ಮಹಿಳೆಯರ ಸಮನ್ವಯ ಸಮಿತಿಗಳನ್ನು ಸಿ.ಐ.ಟಿ.ಯು. ಸಂಘಟಿಸಿದ್ದರೂ ಅವು ಸಿ.ಐ.ಟಿ.ಯು.ನ ಸದಸ್ಯರಿಗೆ ಮಾತ್ರ ಸೀಮಿತವಾಗಿರಲಿಲ್ಲ. ಈ ಸಮನ್ವಯ ಸಮಿತಿಗಳು ಸ್ವತಂತ್ರ ಕಾರ್ಮಿಕ ಸಂಘಗಳಲ್ಲಿ ದುಡಿಯುವ ಮಹಿಳೆಯರು, ಶಿಕ್ಷಕರು, ನರ್ಸ್‌ಗಳು, ಎನ್.ಜಿ.ಓ.ಗಳು ಇತ್ಯಾದಿಯವರನ್ನು ಒಳಗೊಂಡಿದ್ದವು. ಸಿ. ಐ. ಟಿ. ಯು. ದುಡಿಯುವ ಮಹಿಳೆಯರ ಪ್ರತ್ಯೇಕ ಸಂಘಟನೆಯಾಗಿ ಆ ಸಮಿತಿಗಳನ್ನು ಸಂಘಟಿಸಲಿಲ್ಲ. ದುಡಿಯುವ ಮಹಿಳೆಯರ ಸಮಸ್ಯೆಗಳನ್ನು ತೋರಿಸಿಕೊಡಲು ವೇದಿಕೆಯೊಂದನ್ನು ಒದಗಿಸಿತಷ್ಟೆ. ಮಾಲೀಕರು ಮಹಿಳಾ ಕಾರ್ಮಿಕರಿಗೆ ಸಂಬಂಧಪಟ್ಟಂತೆ ಇರುವ ಹಲವಾರು ಕಾರ್ಮಿಕ ಕಾನೂನುಗಳನ್ನು ಜಾರಿಗೊಳಿಸಿಲ್ಲ. ಮಹಿಳಾ ಕಾರ್ಮಿಕರ ಸಂಖ್ಯೆ ಇಳಿಮುಖವಾಗುತ್ತಿದೆ. ಮಹಿಳಾ ಕಾರ್ಮಿಕರಿಗೆ ಮಹಿಳಾ ಕಾರ್ಮಿಕ ನಾಯಕರಿರಲಿಲ್ಲ. ಇವೆಲ್ಲಾ ಕಾರ್ಮಿಕ ಸಂಘಟನೆಯ ಚಳವಳಿ ಕೇವಲ ಪುರುಷರ ಚಳವಳಿ ಮಾತ್ರವಾಗಿಯೇ ಉಳಿಯದಂತೆ ನೋಡಿಕೊಳ್ಳಲು ಸಂಘಟಿತ ಕಾರ್ಮಿಕ ಚಳವಳಿ ಎದುರಿಸಬೇಕಾದ ಸಮಸ್ಯೆಗಳು.

ಕೇರಳ, ತಮಿಳುನಾಡು, ಮಹಾರಾಷ್ಟ್ರ ಇತ್ಯಾದಿ ರಾಜ್ಯಗಳಲ್ಲಿ ನಮ್ಮ ಪಕ್ಷದ ನೇತೃತ್ವದ ಮಹಿಳಾ ಸಂಘಟನೆಗಳು ಹಾಗೂ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಗಳು ಏಕಕಾಲದಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಕರ್ನಾಟಕದಲ್ಲಿ ನಮ್ಮ ಪಕ್ಷದ ನೇತೃತ್ವದ ಮಹಿಳಾ ಸಂಘಟನೆಯಿರಲಿಲ್ಲ. ನಾವು ಮಂಗಳೂರಿನಲ್ಲಿ ದುಡಿಯುವ ಮಹಿಳೆಯರ ರಾಜ್ಯಮಟ್ಟದ ಸಮ್ಮೇಳನ ನಡೆಸಿ ರಾಜ್ಯಮಟ್ಟದ ಸಮನ್ವಯ ಸಮಿತಿಯನ್ನು ಚುನಾಯಿಸಿದ್ದೆವು.

ಆ ಸಮಯದಲ್ಲಿ ನಮ್ಮ ರಾಜ್ಯದಲ್ಲಿ ಮಹಿಳಾ ಸಂಘಟನೆಯಿರಲಿಲ್ಲವಾದ್ದರಿಂದ ಈ ಸಮ್ಮೇಳನ ಹಾಗೂ ಅದರಲ್ಲಿ ಚುನಾಯಿತವಾದ ಸಮನ್ವಯ ಸಮಿತಿಯ ಧ್ಯೇಯಧೋರಣೆಗಳು ಮಹಿಳಾ ಸಂಘಟನೆಯ ಧ್ಯೇಯಗಳೆಂದು ಗೊಂದಲವುಂಟಾಗಿತ್ತು. ಈ ಸಮನ್ವಯ ಸಮಿತಿ ಸ್ವಲ್ಪ ಸಮಯ ಕಾರ್ಯನಿರ್ವಹಿಸಿದ ಮೇಲೆ ಅಖಿಲ ಭಾರತ ಮಟ್ಟದ ಮಹಿಳಾ ಸಂಘಟನೆಯ ಪ್ರಶ್ನೆಯೆದ್ದಿತು. ಅಖಿಲ ಭಾರತ ಪ್ರಜಾಪ್ರಭುತ್ವವಾದೀ ಮಹಿಳೆಯರ ಸಂಘ (AIDWA)ದ ಸ್ಥಾಪನೆಯ ಯೋಜನೆಯಿಂದ ಈ ಗೊಂದಲ ಮತ್ತಷ್ಟು ಹೆಚ್ಚಿತು. ಇನ್ನೊಮ್ಮೆ ಹೇಳುವುದಾದರೆ, ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಧ್ಯೇಯೋದ್ದೇಶ ಹಾಗೂ ಚಟುವಟಿಕೆಗಳು ಮಹಿಳಾ ಕಾರ್ಮಿಕರು ಸಕ್ರಿಯವಾಗಿ ನೇತೃತ್ವ ವಹಿಸುವಂತೆ ಹಾಗೂ ಮಹಿಳಾ ಕಾರ್ಮಿಕರಿಗೆ ಸಂಬಂಧಪಟ್ಟ ಕಾರ್ಮಿಕ ಕಾನೂನುಗಳನ್ನು ಜಾರಿಗೆ ತರುವಲ್ಲಿ ವಿಶೇಷ ಗಮನ ಹರಿಸಿ ಕಾರ್ಮಿಕ ಚಳವಳಿಯಲ್ಲಿನ ಒಂದು ತಪ್ಪನ್ನು ಸರಿಪಡಿಸುವುದೇ ಆಗಿದೆ. ಆದ್ದರಿಂದ AIDWAನ ರಾಜ್ಯ ಘಟಕವನ್ನು ಸ್ಥಾಪಿಸಿದರೂ ದುಡಿಯುವ ಮಹಿಳೆಯರ ಸಮನ್ವಯ ಸಮಿತಿ ಸಿ.ಐ.ಟಿ.ಯು. ವಿನೊಂದಿಗೆ ಕಾರ್ಯನಿರ್ವಹಿಸುತ್ತಲೇ ಇರುತ್ತದೆ.

ಸ್ತ್ರೀ ಸಾತ್ವಂತ್ರ್ಯವಾದೀ ಚಳುವಳಿ ಹಾಗೂAIDWA

DWAನ ರಾಜ್ಯ ಸಮ್ಮೇಳನವನ್ನು ಸಂಘಟಿಸುತ್ತಿರುವವರಲ್ಲಿಕೆಲವು ಸಕ್ರಿಯ ಕಾರ್ಯಕರ್ತರು ತಾವು ಸ್ತ್ರೀ ಸ್ವಾತಂತ್ರ್ಯವಾದಿ (Feminists)ಗಳೆಂದು ಹೇಳಿಕೊಳ್ಳುತ್ತಿದ್ದಾರೆ. ಆದರೆ ಮಹಿಳಾ ಸಂಘಟನೆಯ ಎಲ್ಲಾ ಸದಸ್ಯೆಯರೂ ಸ್ತ್ರೀ ಸ್ವಾತಂತ್ರ್ಯವಾದಿಗಳಾಗಬೇಕೆಂದು ಅವರು ವಾದ ಹೂಡುವುದು ಸರಿಯಲ್ಲ.

ನಮ್ಮ ಸಮಾಜದಲ್ಲಿ ಊಳಿಗಮಾನ್ಯ ಮೌಲ್ಯಗಳು ಹೇರಿರುವ ಬಂಧನಗಳಿಂದ ಮಹಿಳೆಯರು ತಮ್ಮನ್ನು ಬಿಡುಗಡೆಗೊಳಿಸಿಕೊಳ್ಳಬೇಕಾದದ್ದು ಅಗತ್ಯ. ಮಹಿಳೆಯರನ್ನು ಪುರುಷ ಜನಸಮೂಹದ ಅಧೀನರೆಂದು ನಡೆಸಿಕೊಳ್ಳುವ ಸಮಾಜ ನಮ್ಮದು. ಹೆಂಗಸರು ತಮ್ಮ ಜೀವಮಾನದುದ್ದಕ್ಕೂ ಪುರುಷರ ದಬ್ಬಾಳಿಕೆಗೊಳಗಾಗಿದ್ದಾರೆ—ಕುಮಾರಿಯಾಗಿರುವಾಗ ತಂದೆಗೆ, ಹೆಂಡತಿಯಾಗಿ ಗಂಡ ಹಾಗೂ ಆತನ ಕುಟುಂಬಕ್ಕೆ ಹಾಗೂ ವಯಸ್ಸಾದ ತಾಯಿಯಾಗಿ ತನ್ನ ಸ್ವಂತ ಗಂಡು ಮಕ್ಕಳಿಗೆ ಅಧೀನಳಾಗಿದ್ದಾಳೆ. ವರದಕ್ಷಿಣೆಯ ಪದ್ಧತಿ, ಆರ್ಥಿಕ ಅವಲಂಬನೆ, ಪಿತ್ರಾರ್ಜಿತದಲ್ಲಿ ಪಾಲು ಪಡೆಯುವಲ್ಲಿನ ತೊಂದರೆಗಳು ಹಾಗೂ ಇಂತಹ ಹಲವು ಹತ್ತು ಬಂಧನಗಳು ಅವರನ್ನು ಬಂಧಿಸಿಟ್ಟಿವೆ ಹಾಗೂ ಸಮಾನತೆಯನ್ನು ನಿರಾಕರಿಸಿವೆ. ಸಮಾಜ ಮುಂದುವರಿಯುತ್ತಿದ್ದಂತೆ ಊಳಿಗಮಾನ್ಯ ಮೌಲ್ಯಗಳು ನಶಿಸುತ್ತಿವೆ. ಆದರೆ ಬಂಡವಾಳಶಾಹಿ ಮುಂದುವರೆದಂತೆ ಮಹಿಳೆಯರನ್ನು ಬಂಧಿಸಿಟ್ಟ ಊಳಿಗಮಾನ್ಯಮೌಲ್ಯಗಳು ಹೋಗುವುದಿಲ್ಲ. ಬದಲಾಗಿ ವರದಕ್ಷಿಣೆಯಂತಹ ಪದ್ಧತಿಗಳು ಹೆಚ್ಚುತ್ತಿವೆ. ಮಹಿಳೆಯರು ಸ್ವತಂತ್ರರಾಗಿಲ್ಲ. ಮಾತ್ರವಲ್ಲ, ಹಿಂದಿನ ಸಮಾಜ ವ್ಯವಸ್ಥೆಗಳಲ್ಲಿ ಪಡೆದಿದ್ದ ಕೆಲವು ಸಾಮಾಜಿಕ ಪ್ರಯೋಜನಗಳನ್ನು ಕಳಕೊಂಡಿದ್ದಾರೆ. ಅಭಿವೃದ್ಧಿ ಹೊಂದಿದ ಬಂಡವಾಳಶಾಹೀ ಸಮಾಜದಲ್ಲಿ ಆಕೆಯನ್ನು ಜಾಹೀರಾತು ಇತ್ಯಾದಿಗಳ ವಸ್ತುವನ್ನಾಗಿ ಮಾಡಿ ಶೋಷಿಸಲಾಗುತ್ತಿದೆ. ಕೈಗಾರಿಕೆಯ ಸ್ಥಾಪನೆಯೊಂದಿಗೇ ದುಡಿಯುವ ಮಹಿಳೆ ಸ್ವಾವಲಂಬಿಯಾಗಲಿಲ್ಲ. ಇಂತಹ ಪರಿಸ್ಥಿತಿಗಳಲ್ಲೂ ಹಿಂದಿನ ವ್ಯವಸ್ಥೆಗಳ ಮೌಲ್ಯಗಳು ನಶಿಸಿಲ್ಲ. ಹೆಂಗಸರನ್ನು ಸ್ವತಂತ್ರಗೊಳಿಸಬೇಕಾದರೆ ಶೋಷಕ ಲಕ್ಷಣಗಳ ವಿರುದ್ಧ ಹೋರಾಡಿ ಅದನ್ನು ಅಳಿಸಿಬಿಡಬೇಕು. ಶೋಷಣೆಯ ವಿರುದ್ಧ ನಡೆಸುವ ಹೋರಾಟ ಹೆಂಗಸರನ್ನು ವಿಮೋಚನೆಗೊಳಿಸುವ ಹೋರಾಟವಿಲ್ಲದಿದ್ದರೆ ಯಶಸ್ವಿಯಾಗಲು ಸಾಧ್ಯವಿಲ್ಲ. ಆದರೆ ಈ ಹೋರಾಟದಲ್ಲಿ ಅನುಸರಿಸುವ ವಿಧಾನಗಳು ನಮ್ಮ ದೇಶದಲ್ಲಿನ ಪರಿಸ್ಥಿತಿಗಳಿಗೆ ಅನುಗುಣವಾಗಿರಬೇಕು. ಸ್ತ್ರೀ ಸ್ವಾತಂತ್ರ್ಯವಾದಿಗಳಂತೆ ಅಮೇರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಬೆಳೆಸಿಕೊಂಡ ವಿಧಾನಗಳನ್ನು ನಾವು ಆಮದು ಮಾಡಿಕೊಳ್ಳುವುದು ಸಾಧ್ಯವಿಲ್ಲ.

ಸ್ತ್ರೀ ಸ್ವಾತಂತ್ರ್ಯವಾದಿಗಳ ವಿಲಕ್ಷಣತೆಗಳು

ಇಲ್ಲಿನ ಸ್ತ್ರೀ ಸ್ವಾತಂತ್ರ್ಯವಾದಿಗಳು ಅಮೇರಿಕಾ ಹಾಗೂ ಇತರ ಪಾಶ್ಚಿಮಾತ್ಯ ದೇಶಗಳಲ್ಲಿನ ಮಹಿಳೆಯರ ನಕಲು ಮಾಡುತ್ತಿದ್ದಾರೆ. ಏಕಲಿಂಗ ವೇಷಭೂಷಣಗಳನ್ನು ಧರಿಸುವುದು, ಹೆಂಗಸರಿಗೇ ವಿಶೇಷವಾದ ಉಡುಗೆಗಳನ್ನು ಧರಿಸದಿರುವುದು, ಬ್ರಾ ತೊಡದಿರುವುದು, ಗಂಡಸರ ಎಲ್ಲಾ ಹವ್ಯಾಸಗಳನ್ನು ಅವು ಕೆಟ್ಟದಿರಲಿ, ಒಳ್ಳೆದಿರಲಿ ನಕಲು ಮಾಡುವುದು (ಉದಾ : ಕುಡಿಯುವುದು, ಸೇದುವುದು ಇತ್ಯಾದಿ) ಇವನ್ನೆಲ್ಲಾ ಒಂದು ಪಂಥವಾಗಿ ಸ್ತ್ರೀ ಸ್ವಾತಂತ್ರ್ಯವಾದಿಗಳು ಬೆಳೆಸಿಕೊಂಡಂತಿದೆ. ಇಲ್ಲಿ ನಾವು ತಡಮಾಡದೆ ಹೇಳಬೇಕಾದ ವಿಷಯವೆಂದರೆ ಹೊಗೆಬತ್ತಿ ಸೇದುವುದು ಅಥವಾ ಮದ್ಯಪಾನ ಗಂಡಸರಿಗೂ ಅಷ್ಟೆ ಕೆಟ್ಟ ಹವ್ಯಾಸ. ಆದ್ದರಿಂದ ಆ ಹವ್ಯಾಸವನ್ನು ಒಬ್ಬಳು ಮಹಿಳೆ ಬೆಳೆಸಿಕೊಂಡಿದ್ದಾಳೆ ಎಂಬುದಕ್ಕಾಗಿ ಮಾತ್ರ ತನ್ನನ್ನು ದೂಷಿಸಲಾಗುತ್ತದೆ ಎಂದು ಯಾವ ಸ್ತ್ರೀ ಸ್ವಾತಂತ್ರ್ಯವಾದಿಯೂ ತಿಳಿಯದಿರಲಿ. ಸ್ತ್ರೀ ಸ್ವಾತಂತ್ರ್ಯವಾದಿಗಳು ಈ ರೀತಿಯಾಗಿ ವರ್ತಿಸುತ್ತಾರೆ. ಮಾತ್ರವಲ್ಲ, ಇತರರೂ ಹಾಗೇ ಮಾಡಬೇಕೆಂದು ನಿರೀಕ್ಷಿಸುತ್ತಾರೆ. ಇದು ಅನಪೇಕ್ಷಣೀಯ.

[7ನೇ ಪುಟ ನೋಡಿ]

ಬಂಡಾಯ ಸಾಹಿತ್ಯ : ಸಮಾಜವಾದಿ ವಾಸ್ತವತೆ

ಗುಡಿಹಳ್ಳಿ ನಾಗರಾಜ್

[ಎರಡನೇಯ ಬಂಡಾಯ ಸಾಹಿತ್ಯ ಸಮ್ಮೇಳನ (ವಿಜಾಪುರ)ದಲ್ಲಿ ಜರುಗಿದ ಒಟ್ಟು ಚರ್ಚೆಯ ಸಾರ. ಎಲ್ಲ ವರದಿ ಮಾಡಿಟ್ಟುಕೊಂಡಿದ್ದು; ವೈಜ್ಞಾನಿಕ, ಸೈದ್ಧಾಂತಿಕ ದೃಷ್ಟಿಕೋನವಿಟ್ಟುಕೊಂಡು ಕೆಲವರ ಪ್ರಬಂಧಗಳಿಗೆ (ಸಾಹಿತ್ಯದ ಸಿದ್ಧಾಂತೀಕರಣ ಸ್ಪಷ್ಟಗೊಳಿಸಲು; ಸಮರ್ಥಿಸಿಕೊಳ್ಳಲು) ಸ್ವಲ್ಪ ಒತ್ತುಕೊಟ್ಟು ಕೋಟ್ ಮಾಡಿದಂತಿದ್ದ ಪ್ರಬಂಧಗಳನ್ನು ಕೆಲವು ಕೈಬಿಟ್ಟು ಒಂದು ಕೇಂದ್ರಬಿಂದುವಿನ ಸುತ್ತ ರಚಿಸಿದ ಲೇಖನ.]

ಇಲ್ಲಿ ಅನ್ನ ಇರುವವನಿಗೆ ಇರುವ ಸತ್ಯ ಬೇರೆ. ಅನ್ನ ಇಲ್ಲದವನಿಗೆ ಇರುವ ಸತ್ಯ ಬೇರೆ. ಶೋಷಣೆ ವರ್ಗಸಮಾಜದಲ್ಲಿ ಅನಿವಾರ್ಯ. ವರ್ಣ, ಜಾತಿ ಸೃಷ್ಟಿಮಾಡಿರುವ ಕ್ರೂರ ಹಿಂಸೆಯ ಹಿಂದಿರುವ ವರ್ಗಹೋರಾಟದ ಅನಿವಾರ್ಯತೆಯನ್ನು ಸಾಹಿತಿ ಇಂದು ಕಂಡುಕೊಳ್ಳಬೇಕಾಗಿದೆ. ಮನುಷ್ಯ ಮನುಷ್ಯರ ನಡುವೆ ಗೋಡೆ ನಿರ್ಮಿಸಿರುವ ವ್ಯವಸ್ಥೆಯೊಂದರಲ್ಲಿ ಕಾವ್ಯವು ಜೇನಿನಿಂದ ಅದ್ದಿ ತೆಗೆದಂತೆ ಇರಲು ಸಾಧ್ಯವಿಲ್ಲ. ಇಂತಹ ಸಮಯದಲ್ಲಿ ಸಾಹಿತ್ಯದಲ್ಲೂ ಕೂಡಾ ನಿರಾಶೆ, ಅತೃಪ್ತಿ, ಪರಕೀಯತೆ ತಾನೇತಾನಾಗಿ ವಿಜೃಂಭಿಸುತ್ತದೆ. ಈ ಎಲ್ಲಾ ನಿರಾಶೆ, ಅತೃಪ್ತಿ positive ದೃಷ್ಟಿಕೋನವುಳ್ಳ ಸಮಾಜವಾದಿ ವಾಸ್ತವತೆಗೆ ಉತ್ತರವಾಗುವ ಬದಲು ಅಂತರ್ಮುಖತೆ, ಪರಕೀಯತೆಯಲ್ಲಿ ಪರ್ಯಾವಸಾನವಾಗುತ್ತಿದೆ. ಸಮಕಾಲೀನತೆಗೆ ಸ್ಪಂದಿಸದೆ, ವಾಸ್ತವತೆಯ ಚಿತ್ರಣ ಕೊಡಲಾರದ ಸಾಹಿತ್ಯ ಭ್ರಮೆಯ ಲೋಕವನ್ನು ಸೃಷ್ಟಿಸುತ್ತ ವಂಚನೆ ನಡೆಸಿದೆ. ಸಮಕಾಲೀನ ಸಮಸ್ಯೆಗಳಿಗೆ ರಾಮರಾಜ್ಯದ ಕಲ್ಪನೆಯೇ ಉತ್ತರವೆಂದು ಹಿಂದಿನದರ ವೈಭವೀಕರಣ ನಡೆದಿದೆ. ಹೀಗೆ ಪರಂಪರಾಗತವಾದಕ್ಕೆ ಅಂಟಿಕೊಳ್ಳುತ್ತಿರುವವರು ಯಾವುದೇ ವಿಶ್ಲೇಷಣೆ ಮಾಡುವ ಅಗತ್ಯವಿಲ್ಲ. ಆದರೆ ಜನರಿಗೆ ಅಭಿವ್ಯಕ್ತಿ ಕೊಡುವ ಜನಪರ ಸಾಹಿತಿ ಹೊಸ ವ್ಯವಸ್ಥೆಗೆ ಅಣಿಯಾಗಿ ನಿಲ್ಲಬೇಕಾಗುತ್ತದೆ. ಸಮುದಾಯದ ಇತಿಹಾಸವನ್ನು ಅದರ ವಸ್ತುಸ್ಥಿತಿಯ ಬೆಳವಣಿಗೆಯ ಸ್ವರೂಪದಲ್ಲಿ ಪುನರ್ರಚಿಸಬೇಕು. ಅದರಿಂದ ಸಮುದಾಯಕ್ಕೆ ಬರಬಹುದಾದ ಹೊಸ ಚಾರಿತ್ರಿಕ ಪ್ರಜ್ಞೆಯಿಂದ ಚರಿತ್ರೆಯನ್ನು ಬದಲಾಯಿಸುವ ಕೆಲಸದಲ್ಲಿ ಜನತೆಯೂ ಪಾಲ್ಗೊಳ್ಳುವಂತೆ ಮಾಡುವುದು ಸಾಧ್ಯ.

ಚಾರಿತ್ರಿಕ ಚಲನೆಯಿಂದ ಉದ್ಭವಿಸಿರುವ ತಾತ್ವಿಕ ನೆಲೆಗಟ್ಟು ಕಲೆಯ ಮೇಲೆ ಬೀರಿರುವ ಪ್ರಭಾವವನ್ನು ಕಲಾಕಾರನಿಗೂ ಸಾಮಾಜಿಕ ವಾಸ್ತವತೆಗೂ ಇರುವ ಸಂಬಂಧದಲ್ಲಿ ಸುಲಭವಾಗಿ ಗುರುತಿಸಬಹುದು. ವ್ಯಕ್ತಿಯ ಹಾಗೂ ಸಮಾಜದ ನಡುವೆ ಬೆಳೆಯುತ್ತಿರುವ ಕ್ರಾಂತಿಕಾರಕ ಸಂಬಂಧದ ಫಲವೇ ಸಮಾಜವಾದಿ ವಾಸ್ತವತೆ.

ಸಮಾಜವಾದಿ ವಾಸ್ತವತೆ ಪ್ರಸ್ತುತ ವಾಸ್ತವತೆಯ ಚಲನೆಯಲ್ಲಿ ಅಡಕವಾಗಿರುವ ಅಂಶಗಳ ಪ್ರಜ್ಞಾಪೂರ್ವಕ ವಿಮರ್ಶೆಯ ಫಲ. ಇದರಲ್ಲಿ ಮುಖ್ಯವಾಗಿ ಪ್ರತಿಬಿಂಬಿಸಲ್ಪಟ್ಟ ಅಂಶಗಳೆಂದರೆ : 1. ಮನುಷ್ಯ ಹಾಗೂ ಸಮಾಜ ಯಾವಾಗಲೂ ತಮ್ಮ ಪುನಃಸೃಷ್ಟಿಯಲ್ಲಿ ತೊಡಗಿವೆ ಎನ್ನುವ ಪ್ರಜ್ಞೆ ಹಾಗೂ ಇಂದು ಇಂತಹ ಪುನಃಸೃಷ್ಟಿ ಕ್ರಾಂತಿಕಾರಕ ಕ್ರಿಯೆಯಿಂದ ಮಾತ್ರ ಸಾಧ್ಯ ಎನ್ನುವ ಪ್ರಜ್ಞೆ. 2. ವ್ಯಕ್ತಿಗೂ ಸಾಮಾಜಿಕ ಹಾಗೂ ಮಿತ್ತಿತರ ಪರಿಸರಕ್ಕೂ ಇರುವ ಸಂಬಂಧದ ಅಪೌರಣೀಕತೆ. 3. ವಾಸ್ತವತೆಯ ಚಾರಿತ್ರಿಕ ನಿರೂಪಣೆ. ವಾಸ್ತವತೆಯನ್ನು ಚಿತ್ರಿಸುವಾಗ ಅದರ ಹಿನ್ನೆಲೆ ಹಾಗೂ ಮುನ್ನಡೆಯ ಕಡೆ ಸ್ಪಷ್ಟವಾದ ಹಾಗೂ ಪ್ರಜ್ಞಾಪೂರ್ವಕವಾದ ಗಮನ.

ಇಂತಹ ವಾಸ್ತವತೆಯ ಚಿತ್ರಣವನ್ನು ಕೊಡಬೇಕಾದರೆ ಚಿತ್ರಿಸುವ ಕಲಾಕಾರ ವಾಸ್ತವತೆಯ ರೂಪಣೆಯಲ್ಲಿ ಸಕ್ರಿಯವಾಗಿ ಬರೆದದ್ದು ಸಾಕಲ್ಲವೆ ಎನ್ನುವುದರಲ್ಲಿ ತಿರುಳಿಲ್ಲ.

ಸಾಹಿತ್ಯ ಮತ್ತು ರಾಜಕೀಯ ಪ್ರಜ್ಞೆ

ರಾಜಕೀಯ ಎಂದೊಡನೆ ಮಡಿವೈಲಿಗೆ ಮಾಡುವ ರಾಜಕೀಯ ಇಲ್ಲ ಎನ್ನುವ ಭೂಟಾಟಿಕೆ ಕೇಳಿ ಬರುತ್ತದೆ. ಆದರೆ ಯಾವುದರಲ್ಲಿ ರಾಜಕೀಯ ಇಲ್ಲ, ಅರಾಜಕೀಯದಲ್ಲೂ ರಾಜಕೀಯ ಪ್ರಜ್ಞೆ ಇದೆ. ರಾಜಕೀಯ ಅದೊಂದು ಆರ್ಥಿಕ ಉನ್ನತಿಯ ಸಾಮಾಜಿಕ ಪ್ರತಿಷ್ಠೆ. ವ್ಯಕ್ತಿವಾದಿ ಎಂದರೆ ವಾಸ್ತವದಿಂದ ಪಲಾಯನ. ನಶಿಸುತ್ತಿರುವುದರಿಂದ ಹೊಸ ಸಂವೇದನೆಯೊಂದು ಸಾಧ್ಯ. ಇಂತಹ ಸಂವೇದನೆ ದೃಢವಾಗಿರಬೇಕು. ಸಾಮಾಜಿಕ ದೃಷ್ಟಿಕೋನವುಳ್ಳದ್ದಾಗಿರಬೇಕು.

ಮಾನವೀಯ ಮೌಲ್ಯಗಳನ್ನು ಯಾರೂ ತಿರಸ್ಕರಿಸುವುದಿಲ್ಲ. ಆದರೆ ಯಾವ ಸಂದರ್ಭದಲ್ಲಿ ಎನ್ನುವುದು ಮುಖ್ಯ. ಪ್ರೇಮಚಂದ್, ಟಾಲ್‌ಸ್ಟಾಯ್, ನೆರೂಡಾ ಇತರರಿಗಿಂತ ಭಿನ್ನವಾಗುವುದು ಈ ಸಾಹಿತಿಗಳು ಹೆಚ್ಚು ಸಾಮಾಜಿಕವಾದುದರಿಂದ; ಮನುಷ್ಯನ ಬದುಕನ್ನು ಸುಂದರಗೊಳಿಸಬಲ್ಲಂತ ಪರಿಸರ ನಿರ್ಮಾಣದ ರಾಜಕೀಯ ಆಶಯವುಳ್ಳವರಾಗಿರುವುದರಿಂದ.

ಸಾಹಿತಿಗೆ ರಾಜಕೀಯ ಪ್ರಜ್ಞೆ ಬೇಕೆ ಬೇಡವೇ ಎನ್ನುವ ಚರ್ಚೆಯೇ ಅನಾವಶ್ಯಕ. ಆದರೆ ಎಂತಹ ರಾಜಕೀಯ ಪ್ರಜ್ಞೆ ಎನ್ನುವ ವಿಶ್ಲೇಷಣೆ ಬಹುಮುಖ್ಯ. ಬದುಕಿಗೆ ನಿಷ್ಠವಾಗಿರುವ ಸಾಹಿತಿ ಕ್ರಾಂತಿಯ ಮೂರು ಘಟ್ಟಗಳಲ್ಲಿ ಪ್ರಮುಖ ಪಾತ್ರ ನಿರ್ವಹಿಸಬೇಕಾಗುತ್ತದೆ. 1. ಕ್ರಾಂತಿಗೆ ಮುಂಚಿತವಾಗಿ ಸಮಾಜದ ಯಥಾವತ್ತಣ ಚಿತ್ರಕೊಡುವುದು 2. ಈ ಎರಡನೆ ಹಂತದಲ್ಲಿ ಕ್ರಾಂತಿಕಾರಿ ಮುಂಚೂಣಿಯಲ್ಲಿ ಮುಂದೆ ನಿಲ್ಲುತ್ತಾನೆ. ಸಾಹಿತಿ ಹಿಂದೆ ಸರಿಯುತ್ತಾನೆ. 3. ಮೂರನೆ ಘಟ್ಟದಲ್ಲಿ ಸಾಹಿತಿ ಮತ್ತೆ ಬರುತ್ತಾನೆ ಪ್ರಸ್ತುತದ ಚಿತ್ರ ಕಣ್ಣಿಗೆ ಕಟ್ಟುವಂತೆ ನೀಡುತ್ತಾನೆ. ಆದರೆ ಎರಡನೇ ಘಟ್ಟದಲ್ಲಿ ಎಷ್ಟು ಮಂದಿ ಸಾಹಿತಿಗಳು ಬೀದಿಗೆ ಇಳಿಯುತ್ತಾರೆ ?

ವಚನ ಚಳುವಳಿ

ಇತಿಹಾಸ ನಿರ್ಮಾಣ ಮಾಡುವ ಜನರಿಗೆ ಇತಿಹಾಸವನ್ನು ಸರಿಯಾಗಿ ಸಮರ್ಥಿಸುವುದು, ಹಳಿ ತಪ್ಪಿರುವ ಚಳುವಳಿಯ ನಿಜಸ್ವರೂಪ ಅರಿಯುವುದು ಬಹುಮುಖ್ಯ. ಒಂದು ಸಂಘಟಿತ ಹೋರಾಟವಾಗಿ ರೂಪುಗೊಳ್ಳಲು ಸಮರ್ಥವಾದ ಯಾವುದೇ ಚಳುವಳಿಗಳು ಕೇವಲ ಧಾರ್ಮಿಕ ಚೌಕಟ್ಟಿನಲ್ಲಿ ಮಾತ್ರ ಹುಟ್ಟಿಬಂದವುಗಳಾಗಿರುವುದಿಲ್ಲ. ಆಯಾಕಾಲದ ಅನಿವಾರ್ಯತೆಯಿಂದಾಗಿ ಅವು ಧಾರ್ಮಿಕ ತೆರೆಯ ಹಿಂದೆ ಕೆಲಸ ಮಾಡಿದ್ದರೂ, ಅವುಗಳ ಮೂಲನೆಲೆ ಬದುಕಿನ ಮೂಲ ಸೆಲೆಯಾದಂತಹ ಆರ್ಥಿಕ ಜೀವನ ಅವಲಂಬಿಸಿಕೊಂಡೇ ನಡೆದಿರುತ್ತದೆ. ಇದಲ್ಲದೆ ಅಂತಹದೊಂದು ಚಳುವಳಿ ಯಾರೋ ಒಬ್ಬ ಅಪೌರುಷೇಯನೆಂದು ಕರೆಯಬಹುದಾದ ವ್ಯಕ್ತಿಯೊಬ್ಬನು "ಹುಟ್ಟಿ ಅದನ್ನು ಹುಟ್ಟಿಹಾಕಿದ್ದಾಗಿಯೂ ನಡೆದಿರುವುದಿಲ್ಲ. ಹೀಗೆಂದ ಮಾತ್ರಕ್ಕೆ ಚಳುವಳಿಯೊಂದರ ನೇತೃತ್ವವನ್ನು ವಹಿಸಿದ ವ್ಯಕ್ತಿಗೆ ಆ ಸಂದರ್ಭದಲ್ಲಿ ಯಾವುದೇ ಮಹತ್ವವಿಲ್ಲವೆಂದು ಅರ್ಥವಲ್ಲ. ಮಾನವ ಚರಿತ್ರೆಯ ಕಾಲಘಟ್ಟದಲ್ಲಿ ಒಬ್ಬ ಸಾಮಾನ್ಯನೆನ್ನಬಹುದಾದವನು ಕೂಡ ಕಾಲ ಸಂದರ್ಭಗಳ ಬಲದಿಂದ ಅಂತಹ ವ್ಯಕ್ತಿ ತನ್ನ ಕಾಲದ ಆಶೋತ್ತರಗಳಿಗೆ ಹೇಗೆ ಪ್ರತಿಕ್ರಿಯೆ ತೋರಿಸುತ್ತಾನೆಂಬುದರ ಮೇಲೆ ಪಾತ್ರವು ನಿರ್ಧಾರಗೊಳ್ಳುತ್ತದೆ. ಹೀಗೆ ಒಂದು ಚಳುವಳಿಯ ನೇತೃತ್ವವಹಿಸುವ ವ್ಯಕ್ತಿಗಳು ಅವರ ಹಿಂದೆ ಇರಬಹುದಾದ ಅಸಂಖ್ಯಾತ ಜನಗಳ ಆಶೋತ್ತರಗಳ ಪ್ರತೀಕವಾಗಿರುತ್ತಾರೆ. ಈ ನೇತಾರರು ಎಷ್ಟೆಷ್ಟು ಜನತೆಯ ಆಶೋತ್ತರಗಳಿಗೆ ಬದ್ಧರಾಗಿರುತ್ತಾರೆಂಬುದರ ಮೇಲೆಯೇ ಆ ಚಳುವಳಿಯ ಸಫಲತೆಯೂ ಅವಲಂಬಿಸಿರುತ್ತದೆ. ಆದ್ದರಿಂದ ವಚನಕಾರರ ಚಳುವಳಿಯನ್ನು ವಿಶ್ಲೇಷಿಸುವಂತಹ ಸಂದರ್ಭದಲ್ಲಿ ಆ ಚಳುವಳಿಯ ಹುಟ್ಟಿಗೆ ಹಿನ್ನೆಲೆಯಾಗಿದ್ದ ಸಾಮಾಜಿಕ ಸ್ವರೂಪವನ್ನು ನಾವು ಗಮನಕ್ಕೆ ತಂದುಕೊಳ್ಳುವುದು ಅನಿವಾರ್ಯವಾಗುತ್ತದೆ. ಮಠಗಳ ಶೋಷಣೆ ವಿರುದ್ಧ ತೀವ್ರವಾಗಿ ದನಿ ಎತ್ತಿದ ಬಸವಣ್ಣ ಆ ಪ್ರತಿಭಟನೆಯ ಧ್ವನಿಯನ್ನು ರಾಜಕೀಯ ಶಕ್ತಿಯಾಗುವುದರಿಂದ ದೂರವಿರಿಸಲು ಪ್ರಯತ್ನಿಸಿದರೂ ಅದು ಅವನ ಕೈಮೀರಿ ರಾಜಕೀಯ ಸಮಸ್ಯೆಯೇ ಆದಾಗ ಆ ಸಂದರ್ಭದಲ್ಲಿ ನಾಯಕತ್ವವನ್ನು ತ್ಯಜಿಸಿ ಅರ್ಥಾತಾ ರಾಜಕೀಯ ಸಮಸ್ಯೆಗೆ ಆಧ್ಯಾತ್ಮದಲ್ಲಿ ಉತ್ತರವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಾನೆ. ಹೀಗಾಗಿ ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಂಡು ಬಿಡುತ್ತಾನೆ. ಹೀಗಾಗಿ ಬಸವಣ್ಣ ನೇತೃತ್ವ ವಹಿಸಿದ ಚಳುವಳಿ ಸಾಂಪ್ರದಾಯಿಕ ಜಢ ಜಾತಿಯಾಯಿತು.

ಆದರೆ ಚರಿತ್ರೆಯಲ್ಲಿ ಬರುವ ಈ ಎಲ್ಲಾ ಚಳುವಳಿಗಳನ್ನು ಗಮನಿಸಬೇಕಾಗುತ್ತದೆ. ತಿಳಿದುಕೊಳ್ಳಬೇಕಾಗುತ್ತದೆ, ಅರ್ಥೈಸಿಕೊಳ್ಳಬೇಕಾಗುತ್ತದೆ; ಇದು ಚರಿತ್ರೆಯ ನಿರ್ಮಾಣಕ್ಕೆ ಗುರಿ ಸ್ಪಷ್ಟವಾಗಲು ಜನಪರ ಹೋರಾಟದಲ್ಲಿ ಪಾಲ್ಗೊಳ್ಳುವವರೆಲ್ಲರೂ ಅರಿತುಕೊಳ್ಳಬೇಕಾಗುತ್ತದೆ.

ಜನಪದ

ಬಂಡಾಯದ ಆಶಯಗಳನ್ನು ಅಭಿವ್ಯಕ್ತಿಸಲು ಜನಪದದ ಆಳವಾದ ಅಧ್ಯಯನ ಬಹುಮುಖ್ಯ. ಪ್ರಾಚೀನ ಸಮತಾವಾದದ ನಂತರ ಖಾಸಗಿ ಆಸ್ತಿ – ಇದರ ಒಡಲಲ್ಲೇ ಜಾತಿ ವರ್ಣ ಸೃಷ್ಟಿಯಾದವು. ಆಳುವ ಆಳಿಸಿಕೊಳ್ಳುವ ಕಾಲ ಬಂದಾಗಲೇ; 1) ಶಿಷ್ಟಸಂಸ್ಕೃತಿ 2) ಜನಪದ ಸಂಸ್ಕೃತಿ ಬಂದವು. ಆಳುವವರ ಸಂಸ್ಕೃತಿಯೇ ಶಿಷ್ಟಸಂಸ್ಕೃತಿ. ಆಳಿಸಿಕೊಳ್ಳುವವರ ಸಂಸ್ಕೃತಿಯೇ ಜನಪದ ಸಂಸ್ಕೃತಿ. ಎಲ್ಲವನ್ನು ಸೃಷ್ಟಿಸುವವರು ದುಡಿಯುವ ಜನ. ಈ ಜನ ತಮ್ಮಸ್ತಿಕೆ ಮರೆತು ಆಳುವವರ ಮೌಲ್ಯಗಳನ್ನು ಇವರ ಮೌಲ್ಯಗಳಾಗಿ ಮಾಡಿಕೊಳ್ಳಲು ಯತ್ನಿಸಿದ್ದಾರೆ. ತಾವು ಕೀಳು ಎಂದು ಕೆಳಗಿನ ಜನ ತಿಳಿದುಕೊಂಡಿದ್ದಾರೆ. ಇಂತಹ ಕೀಳರಿಮೆ ಇವರನ್ನು ಕಾಡುತ್ತಿದೆ. ತಮ್ಮ ದೇವತೆಯನ್ನು ಆಳುವ ಜನರೊಂದಿಗೆ ಸಂಬಂಧ ಕಲ್ಪಿಸುತ್ತಾರೆ. ದೇವರನ್ನು ಬೈಯ್ಯುವುದು, ದೇವರನ್ನು ಮನುಷ್ಯರ ಮಟ್ಟಕ್ಕೆ ತರುವುದು ಜನಪದ ಸಂಸ್ಕೃತಿಯಲ್ಲಿ ಕಾಣುತ್ತೇವೆ. ಆದರೆ ಶಿಷ್ಟಸಂಸ್ಕೃತಿಯಲ್ಲಿ ಇದು ಸಾಧ್ಯವಿಲ್ಲ. ಶಿಷ್ಟ ಸಮಾಜದ ಮೌಲ್ಯ ಜನತೆ ಒಪ್ಪಿಕೊಂಡಿರುವುದು ಕೆಲವೊಂದು ಇತಿಹಾಸಿಕ ಒತ್ತಡಗಳಿಗಾಗಿ ಮಾತ್ರ. ಆದರೆ ಅದೇ ಜನಪದದ ಧೋರಣೆಯಲ್ಲ, ಪ್ರತಿಭಟನೆ ಬೈಗುಳ ರೂಪದಲ್ಲಿ ಹೊರಬಂದಿದೆ. ಆದ್ದರಿಂದ ಎಲ್ಲ ಬೈಗುಳನ್ನು ಗಮನಿಸಬೇಕು. ಜನತೆಯ ಈ ಎಲ್ಲಾ ಎಚ್ಚರಗಳನ್ನು ಉಪಯೋಗಿಸಿಕೊಂಡು ಸೂಕ್ತ ರಾಜಕೀಯ ಸ್ವರೂಪಕೊಡಬೇಕು. ಸಂಘಟನೆಗೆ ತೊಡಗಿಸಬೇಕು. ಜನತೆಗೆ ಸೂಕ್ತ ರಾಜಕೀಯ ಕೊಡುವುದರ ಸಂಘಟಿಸುವುದರ ಮೂಲಕ ಹೋರಾಟಕ್ಕಿಳಿಯಬಹುದು.

ಸಮೂಹ ಮಾಧ್ಯಮಗಳು

ಸಮಾಜ ಬದಲಾವಣೆಯ ಮಾಧ್ಯಮವಾಗಿ ಉಪಯೋಗಿಸಿಕೊಳ್ಳಲು ಸಮೂಹ ಮಾಧ್ಯಮಗಳು ಪ್ರಬಲವಾದ ಅಸ್ತ್ರಗಳು. ರೇಡಿಯೋ ಅತ್ಯಂತ ಪ್ರಬಲ ಮಾಧ್ಯಮ. ಆದರೆ ಸರಕಾರ ತನ್ನ ಹತೋಟಿಯಲ್ಲಿಟ್ಟುಕೊಂಡಿದೆ. ಚಲನಚಿತ್ರ ಬಹಳ ಜನ ತಲುಪುವಂತ ಮಾಧ್ಯಮ. ಅದಕ್ಕಾಗಿ ಸೆನ್ಸಾರ್ ಇದೆ. ಪುಸ್ತಕಕ್ಕೆ ಸೆನ್ಸಾರ್ ಇಲ್ಲ. ಯಾಕೆಂದರೆ ಅದಕ್ಕೆ ಬಹಳ ಪ್ರಸಾರ ಇಲ್ಲ. ಮಹಾರಾಷ್ಟ್ರದಲ್ಲಿ ಒಂದು ಕಾಲಕ್ಕೆ ರಂಗಭೂಮಿ ಚಳುವಳಿ ಹೆಚ್ಚಾಗಿ ಬೆಳೆದಾಗ ಸೆನ್ಸಾರ್ ಬಂತು. ಆದರೂ ನಾಟಕ ಹಾಗೂ ಹಾಡು ಜನರನ್ನು ತಲುಪಲು ಇರುವ ಪ್ರಮುಖ (ಅಂದರೆ ಕಡಿಮೆ ಖರ್ಚಿನ) ಮಾಧ್ಯಮಗಳು. ನಾಟಕಗಳಲ್ಲಿ ದುಡಿಯುವ ವರ್ಗದ ಆಶೋತ್ತರಗಳಿಗೆ ಅಭಿವ್ಯಕ್ತಿ ಕೊಡಬೇಕು. —ಯಾಕೆಂದರೆ ಮೇಲಿನ ವರ್ಗಕ್ಕೆ ಯಥಾಸ್ಥಿತಿವಾದ ಬೇಕು. ಆದರೆ ಕೆಳಗಿನ ವರ್ಗಕ್ಕೆ ಬದಲಾವಣೆ ಬೇಕು. ಪ್ರಜಾಪ್ರಭುತ್ವ ಚಳುವಳಿಯೊಂದಿಗೆ ರಂಗಭೂಮಿ ಜತೆಯಾಗಿ ನಿಲ್ಲಬೇಕು. ಸಾಂಸ್ಕೃತಿಕ ರಂಗದಲ್ಲಿರುವ ವೈರಿಗಳು ವ್ಯವಸ್ಥಿತವಾಗಿ ಕೆಲಸ ಮಾಡುತ್ತಿದ್ದಾರೆ. ಕೇವಲ ಎರಡು ಮೂರು ತಾಸಿನ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಇಲ್ಲದ ಭ್ರಮಾಲೋಕ ಸೃಷ್ಟಿಸಿ ಜನರ ಭಾವನೆಗಳೊಂದಿಗೆ ಚೆಲ್ಲಾಟವಾಡುತ್ತ ಫಲಾಯನವಾದಿ ಸಂಸ್ಕೃತಿಯನ್ನು ದಟ್ಟವಾಗಿ ಹರಡುತ್ತಿದ್ದಾರೆ. ಇಂತಹ ಸಂಸ್ಕೃತಿ ವಿರುದ್ಧ ಪ್ರಬಲವಾದ ಪ್ರಜಾಪ್ರಭುತ್ವ ಚಳುವಳಿಯನ್ನು ರೂಪಿಸಬೇಕು. ಈ ದಿಶೆಯಲ್ಲಿ ಒಬ್ಬೊಬ್ಬರೇ ಹೋರಾಡುತ್ತಿದ್ದರೆ ಸಾಲದು. (ಉದಾ : ಕಾರಂತ, ಎಂ.ಎಸ್. ಸತ್ಯು, ಲಂಕೇಶ್ ಇತ್ಯಾದಿ) ಇಂತಹವರನ್ನೆಲ್ಲ ಒಳಗೊಂಡು ಒಂದು ಪ್ರಮುಖವಾದ ಚಳುವಳಿಯನ್ನೇ ರೂಪಿಸಬೇಕು. ಏಕೆಂದರೆ ವೈರಿ ಬಹಳ ಪ್ರಬಲವಾಗಿದ್ದಾನೆ. ಖಾಸಗಿ ಬಂಡವಾಳಶಾಹಿ ಸಿನಿಮಾ ವ್ಯವಸ್ಥೆ ನಮ್ಮ ಸಮಾಜಕ್ಕಿಂತ ಭಿನ್ನವೇನೂ ಅಲ್ಲ. ಖಾಸಗಿ ವ್ಯವಸ್ಥೆ ವಿರುದ್ಧ ಹೇಗೆ ಕ್ರಾಂತಿಯಾಗಬೇಕೋ, ಹೇಗೆ ದೊಡ್ಡ ಮಟ್ಟದಲ್ಲಿ ಜನರ ಸಂಘಟನೆಗಳು ಹುಟ್ಟಿಕೊಳ್ಳಬೇಕೋ ಅದೇ ರೀತಿಯಲ್ಲಿ ಸಾಂಸ್ಕೃತಿಕ ರಂಗದಲ್ಲೂ ಖಾಸಗೀ ಮಾಡಿ

(7ನೇ ಪುಟ ನೋಡಿ)

ಸಿ. ಐ. ಟಿ. ಯು. ವಿನ ಧ್ಯೇಯೋದ್ದೇಶಗಳು

[ಸಿ.ಐ.ಟಿ.ಯು. ಸ್ಥಾಪನೆಯಾಗಿ ಮೇ ೩೦, ೧೯೭೦ಕ್ಕೆ ೧೧ ವರ್ಷಗಳಾದವು. ಈ ನಿಮಿತ್ತ ಈ ವಿಶೇಷ ಲೇಖನ ಪ್ರಕಟಿಸಲಾಗಿದೆ]

ಕರ್ನಾಟಕದಲ್ಲಿ ಸಿ. ಐ. ಟಿ. ಯು. ಇತ್ತೀಚೆಗಿನ ವರ್ಷಗಳಲ್ಲಿ ಭರದಿಂದ ಬೆಳೆಯುತ್ತಿದೆ, ಜನಪ್ರಿಯವಾಗುತ್ತಿದೆ. ಆರ್ಥಿಕ, ಸಾಮಾಜಿಕ ಶೋಷಣೆ ಹಾಗೂ ಅನ್ಯಾಯಗಳ ವಿರುದ್ಧ ಹೋರಾಡಲು ನಾಡಿನ ಅಸಂಖ್ಯಾತ ಕಾರ್ಮಿಕರು ಸಿ. ಐ. ಟಿ. ಯು.ವಿನ ಮಾರ್ಗದರ್ಶನವನ್ನು ಪಡೆಯಲು ಹಾತೊರೆಯುತ್ತಿದ್ದಾರೆ. ರೈತಸಂಘಟನೆಗಳೊಂದಿಗೆ ಸಿ. ಐ. ಟಿ. ಯು.ವಿನ ನಿಕಟ ಸ್ನೇಹಸಂಬಂಧ ಹೆಚ್ಚುತ್ತಿದೆ. ಕಳೆದ ಮಾರ್ಚ್ ತಿಂಗಳ ಮೊದಲ ವಾರದಲ್ಲಿ ಹರಿಹರದಲ್ಲಿ ನಡೆದ ಸಿ. ಐ. ಟಿ. ಯು.ವಿನ ರಾಜ್ಯಮಟ್ಟದ ಮೂರನೇ ಸಮ್ಮೇಳನವು ಅತ್ಯಂತ ಸ್ಫೂರ್ತಿದಾಯಕವಾಗಿದೆ. ಇಂತಹ ಸಂದರ್ಭದಲ್ಲಿ, ಕರ್ನಾಟಕ ರಾಜ್ಯದಲ್ಲಿ ಕಾರ್ಮಿಕಸಂಘಟನೆ ಇನ್ನಷ್ಟೂ ಬೆಳೆದು ಬಲಗೊಳ್ಳಲು, ಹೊಸ ಸಂಘಟನೆಗಳಿಗೆ ನೆರವಾಗಲು, ಸಿ. ಐ. ಟಿ. ಯು.ವಿನ ಧ್ಯೇಯೋದ್ದೇಶಗಳನ್ನು ಅವರ ಸಂವಿಧಾನದಲ್ಲಿ ತಿಳಿಸಿರುವಂತೆ ಸಂಕ್ಷಿಪ್ತವಾಗಿ ಸಂಗ್ರಹಿಸಿಕೊಡಲಾಗಿದೆ.

ಸಮಾಜವಾದಿ ಸಮಾಜ ಸ್ಥಾಪನೆ

ಉತ್ಪಾದನೆ, ವಿತರಣೆ ಮತ್ತು ವಿನಿಮಯದ ಎಲ್ಲಾ ಮಾಧ್ಯಮಗಳನ್ನು ಸಮಾಜೀಕರಣಗೊಳಿಸುವ ಮೂಲಕ ಮತ್ತು ಸಮಾಜವಾದಿ ರಾಜ್ಯವನ್ನು ಸ್ಥಾಪಿಸುವ ಮೂಲಕ ಶ್ರಮಿಕವರ್ಗದ ಮೇಲೆ ನಡೆಯುತ್ತಿರುವ ಶೋಷಣೆಯನ್ನು ಕೊನೆಗೊಳಿಸಬಹುದು ಎಂದು ಸಿ. ಐ. ಟಿ. ಯು. ನಂಬುತ್ತದೆ. ಸಮಾಜವಾದದ ತತ್ವಕ್ಕೆ ನಿಕಟವಾಗಿ ನೆಚ್ಚಿಕೊಂಡು, ಸಮಾಜವನ್ನು ಎಲ್ಲಾ ಶೋಷಣೆಯಿಂದ ಸಂಪೂರ್ಣವಾಗಿ ಮುಕ್ತಗೊಳಿಸಲು ಸಿ. ಐ. ಟಿ. ಯು. ದೃಢ ಸಂಕಲ್ಪ ಹೊಂದಿದೆ.

ಹೋರಾಟಗಳು

ಶ್ರಮಿಕವರ್ಗದ ಆರ್ಥಿಕ, ಸಾಮಾಜಿಕ ಉನ್ನತಿಗಾಗಿ ಸಿ. ಐ. ಟಿ. ಯು. ಸಂಘಟಿತ ಹೋರಾಟದ ಮಾರ್ಗವನ್ನು ಅನುಸರಿಸುತ್ತದೆ. ಮುಖ್ಯವಾಗಿ ಅದು ಈ ಕೆಳಗಿನವುಗಳಿಗಾಗಿ ಹೋರಾಟ ನಡೆಸುವುದು.

* ಕಾರ್ಮಿಕರ ಆರ್ಥಿಕ ಮತ್ತು ಸಾಮಾಜಿಕ ಹಕ್ಕುಗಳ ಎಲ್ಲಾ ಆಕ್ರಮಣಗಳ ವಿರುದ್ಧ ಹೋರಾಟ ನಡೆಸುವುದು. ಮುಷ್ಕರ ಹೂಡುವ ಹಕ್ಕೂ ಸೇರಿದಂತೆ, ಅವರ ಹಕ್ಕು ಸ್ವಾತಂತ್ರ್ಯಗಳನ್ನು ಇನ್ನಷ್ಟೂ ಹೆಚ್ಚಿಸಲು, ಪ್ರಜಾಸತ್ತಾತ್ಮಕ ಮತ್ತು ಕಾರ್ಮಿಕಸಂಘಗಳ ಚಳುವಳಿಗಳನ್ನು ಗೆಲ್ಲಲು ಮತ್ತು ಅಂತಹ ಹಕ್ಕುಗಳನ್ನು ರಕ್ಷಿಸಲು ಹಾಗೂ ವಿಸ್ತರಿಸಲು ಹೋರಾಟ ನಡೆಸುವುದು.

* ಗುಪ್ತಮತದಾನದ ಮೂಲಕ ಕಾರ್ಮಿಕರ ಸಂಘಟನೆಗಳಿಗೆ ಮಾನ್ಯತೆ ನೀಡುವುದು.

* ವೇತನವನ್ನು ಏರಿಕೆಯ ದರದಲ್ಲಿ ಹೆಚ್ಚಿಸುವುದು, ಕೆಲಸದ ಅವಧಿಯನ್ನು ಕಡಿಮೆಮಾಡುವುದು. ಯೋಗ್ಯ ವಸತಿ ಸೌಕರ್ಯಗಳನ್ನೊದಗಿಸುವುದು ಮತ್ತು ಕಾರ್ಮಿಕರ ಜೀವನ ಸ್ಥಿತಿಯನ್ನು ಉತ್ತಮಗೊಳಿಸುವುದು.

* ಸಂಪೂರ್ಣ ಉದ್ಯೋಗ ದೊರಕಿಸುವುದು, ದುಡಿಮೆಯ ಹಕ್ಕನ್ನು ಪ್ರತಿಪಾದಿಸುವುದು, ನಿರುದ್ಯೋಗದ ಗಂಡಾಂತರಗಳ ವಿರುದ್ಧ ಹೋರಾಡುವುದು.

* ಅನಾರೋಗ್ಯ, ಅಪಘಡ ಮತ್ತು ವೃದ್ಧಾಪ್ಯ ಇವುಗಳ ವಿರುದ್ಧ ಕಾರ್ಮಿಕರನ್ನು ಮತ್ತು ಅವರ ಕುಟುಂಬಗಳನ್ನು ರಕ್ಷಿಸಲು ಸಂಪೂರ್ಣ ಮತ್ತು ಸಾಕಷ್ಟು ಸಾಮಾಜಿಕ ರಕ್ಷಣಾ ಕಾನೂನು, ಸಾಕಷ್ಟು ಹೆರಿಗೆವಿಮೆ ಮತ್ತು ವಿಧವೆ ತಾಯಂದಿರಿಗೆ ಮತ್ತು ಅವಲಂಬಿತ ಮಕ್ಕಳಿಗೆ ವಿರಾಮ ವೇತನ, ಪ್ರತಿಯೊಂದು ಅನಿಶ್ಚಿತತೆಗೂ ಸಾಮಾಜಿಕ ಭದ್ರತೆ, ಕ್ಷೇಮ ನಿಧಿ ಮತ್ತು ಕಾರ್ಮಿಕರ ರಾಜ್ಯ ವಿಮಾ ಕಾರ್ಪೊರೇಷನ್‌ಗಳ ಮೇಲೆ ಕಾರ್ಮಿಕ ಚಂದಾದಾರರ ಪರಿಣಾಮಕಾರಿ ನಿಯಂತ್ರಣ.

* ಸಮಾನ ಕೆಲಸಕ್ಕೆ ಸಮಾನ ವೇತನ.

* ಉದ್ಯೋಗ, ವೇತನ ಮತ್ತು ಭಡತಿ ವಿಷಯಗಳಲ್ಲಿ ಅಸ್ಪೃಶ್ಯತೆಯಂತಹ ಜಾತೀಯ ಪ್ರಶ್ನೆ, ಲಿಂಗಭೇದ, ಧಾರ್ಮಿಕ ತಳಹದಿಯಲ್ಲಿ ತಾರತಮ್ಯ ಇತ್ಯಾದಿಗಳನ್ನು ರದ್ದುಗೊಳಿಸುವುದು.

* ಅಲ್ಪಸಂಖ್ಯಾತರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ರಕ್ಷಿಸುವುದು.

* ಕಾರ್ಖಾನೆಗಳಲ್ಲಿ, ಕೆಲಸಾಗಾರಗಳಲ್ಲಿ ಉದ್ದಿಮೆಗಳಲ್ಲಿ ಮತ್ತು ಸಾಮುದಾಯಿಕ ಕೆಲಸ ನಡೆಯುವ ಎಲ್ಲಾ ಸ್ಥಳಗಳಲ್ಲಿ ಕೆಲಸದ ಪರಿಸ್ಥಿತಿಯನ್ನು ನಿಯಂತ್ರಿಸುವ ದೃಷ್ಟಿಯಿಂದ ಕಾರ್ಮಿಕರ ಚುನಾಯಿತ ಸಮಿತಿಗಳನ್ನು ರಚಿಸುವುದು.

* ಪ್ರತಿಯೊಂದು ಉದ್ದಿಮೆಯ ಕುರಿತು ಸೂಕ್ತ ತರಬೇತಿ ನೀಡುವುದು.

* ನಿರಕ್ಷರತೆಯನ್ನು ಹೋಗಲಾಡಿಸುವುದು.

* ಕಾರ್ಮಿಕ ಸಂಘಗಳು ಇರದಿರುವಲ್ಲಿ ಸಂಘಗಳನ್ನು ಸ್ಥಾಪಿಸಲು ಕಾರ್ಮಿಕರಿಗೆ ನೆರವಾಗುವುದು. ಪ್ರತಿಸ್ಪರ್ಧಿ ಸಂಘಟನೆಗಳಿರುವಲ್ಲಿ ಕಾರ್ಮಿಕರನ್ನೆಲ್ಲಾ ಒಂದು ಕೈಗಾರಿಕೆಗೆ ಒಂದು ಸಂಘ ಎಂಬ ಆಧಾರದಲ್ಲಿ ಒಟ್ಟುಗೂಡಲು ಕಾರ್ಮಿಕರಿಗೆ ಪ್ರೋತ್ಸಾಹ ನೀಡುವುದು, ಸಹಕರಿಸುವುದು.

ಸಾಮಾಜಿಕ ಬದಲಾವಣೆಗಾಗಿ ಮುಖ್ಯ ಬೇಡಿಕೆಗಳು

ಶ್ರಮಿಕವರ್ಗದ ಸದ್ಯದ ಹಿತಾಸಕ್ತಿಗಳಿಗಾಗಿ ನಡೆಯುವ ಹೋರಾಟಗಳಲ್ಲಿ ಸಿ. ಐ. ಟಿ. ಯು. ಸಮಾಜದ ಮೂಲಭೂತ ಬದಲಾವಣೆಗಾಗಿ ಈ ಕೆಳಗಿನ ಮುಖ್ಯ ಬೇಡಿಕೆಗಳನ್ನು ಮುಂದೊಡ್ಡುವುದು.

* ಶ್ರಮಿಕವರ್ಗವನ್ನು ಅಮಾನುಷವಾಗಿ ಶೋಷಣೆಮಾಡುತ್ತಿರುವ ಎಲ್ಲಾ ವಿದೇಶಿ ಗುತ್ತೇದಾರಿ ಸಂಸ್ಥೆಗಳನ್ನು ರಾಷ್ಟ್ರೀಕರಿಸುವುದು.

* ಕಾರ್ಮಿಕರ ಶೋಷಣೆಯಿಂದ ಬೃಹತ್ ಪ್ರಮಾಣದಲ್ಲಿ ಲಾಭ ದೋಚುವ, ಎತ್ತರಕ್ಕೆ ಬೆಲೆಏರಿಸಿ ಜನರನ್ನು ಶೋಷಿಸುವ ಮತ್ತು ಕಾರ್ಮಿಕರ ವಿರೋಧಿ ಹಾಗೂ ಜನವಿರೋಧಿ ಧೋರಣೆಗಳನ್ನು ತರುವಂತೆ ಸರಕಾರಕ್ಕೆ ನಿರ್ದೇಶಿಸುವ ಭಾರತದ ಎಲ್ಲಾ ಗುತ್ತೇದಾರಿ ಹಾಗೂ ದೊಡ್ಡ ಕೈಗಾರಿಕೆಗಳನ್ನು ರಾಷ್ಟ್ರೀಕರಿಸುವುದು.

* ಪ್ರಜಾಸತ್ತಾತ್ಮಕ ಮತ್ತು ಕಾರ್ಮಿಕ ಸಂಘಟನೆಗಳ ಆಂದೋಳನಗಳ ವಿರುದ್ಧ ಸರಕಾರದ ದಮನಕಾರಿ ಧೋರಣೆಯ ವಿರುದ್ಧ ಹೋರಾಡುವುದು. ಹೆಚ್ಚುತ್ತಿರುವ ತೆರಿಗೆ ಮತ್ತು ಹಣದುಬ್ಬರಗಳಿಂದ ಶ್ರಮಿಕವರ್ಗದ ಮತ್ತು ಜನಸಾಮಾನ್ಯರ ಮೇಲೆ ಭಾರ ಹೇರುತ್ತಿರುವ ಮತ್ತು ಬಂಡವಾಳಶಾಹಿಗಳ ಹಾಗೂ ಭೂಮಾಲಕರ ಹಿತಾಸಕ್ತಿಗಳನ್ನು ಕಾಪಾಡುವ ಆರ್ಥಿಕ ಧೋರಣೆಯ ವಿರುದ್ಧ ಹೋರಾಡುವುದು. ಈಗಿನ ಬಂಡವಾಳಶಾಹಿ ಭೂಮಾಲೀಕ ಆಳ್ವಿಕೆಯನ್ನು ಹೋಗಲಾಡಿಸಿ ಜನರ ಪ್ರಜಾಸತ್ತಾತ್ಮಕ ಆಳ್ವಿಕೆಯನ್ನು ಸ್ಥಾಪಿಸಲು ಹೋರಾಡುವುದು.

ಪ್ರಜಾಸತ್ತಾತ್ಮಕ ಶಕ್ತಿಗಳೊಂದಿಗೆ ಸಹಕಾರ ಸಂಬಂಧ

ಸದ್ಯದ ಬಂಡವಾಳಶಾಹಿ ಭೂಮಾಲಕ ಆಡಳಿತವನ್ನು ತೆಗೆದೊಗೆದು ಜನರ ಪ್ರಜಾಸತ್ತಾತ್ಮಕ ಆಳ್ವಿಕೆಯನ್ನು ಸ್ಥಾಪಿಸಲು ನಡೆಯುವ ಸಮಾನೋದ್ದೇಶಗಳ ಹೋರಾಟಕ್ಕಾಗಿ ಸಿ. ಐ. ಟಿ. ಯು. ಇತರ ವಿಭಾಗದ ಜನರ ಪ್ರಜಾಸತ್ತಾತ್ಮಕ ಬೇಡಿಕೆಗಳಿಗೆ ಬೆಂಬಲ ಕೊಡುವುದಲ್ಲದೆ, ಇತರ ಪ್ರಜಾಸತ್ತಾತ್ಮಕ ಶಕ್ತಿಗಳ ಮತ್ತು ಸಂಘಟನೆಗಳ ಸಹಕಾರವನ್ನು ನಿರೀಕ್ಷಿಸುತ್ತದೆ.

ರಾಷ್ಟ್ರೀಯ ಸ್ವಾತಂತ್ರ್ಯ ಸ್ವಾವಲಂಬನೆಗೆ ಬೆಂಬಲ

ಸಿ.ಐ.ಟಿ.ಯು. ಅಮೆರಿಕ ಮತ್ತು ಇತರ ವಿದೇಶಿ ಗುತ್ತೇದಾರಿ ಬಂಡವಾಳವನ್ನು ನಮ್ಮ ಆರ್ಥಿಕ ವ್ಯವಸ್ಥೆಯು ಹೆಚ್ಚು ಹೆಚ್ಚು ಅವಲಂಬಿಸುವುದರ ವಿರುದ್ಧ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸುವುದು. ಕಾರಣ ವಿದೇಶಿ ಅವಲಂಬನೆಯಿಂದಾಗಿ ವಿದೇಶಿ ಋಣಭಾರವು ಹೆಚ್ಚುತ್ತಲಿದ್ದು ರಾಷ್ಟ್ರೀಯ ಸ್ವಾತಂತ್ರ್ಯಕ್ಕೆ ಗಂಡಾಂತರ ಪರಿಸ್ಥಿತಿಯುಂಟಾಗುವುದು ಮತ್ತು ಶ್ರಮಿಕ ವರ್ಗವು ತೀವ್ರವಾಗಿ ಶೋಷಿಸಲ್ಪಡುವುದು.

ರೈತ-ಕಾರ್ಮಿಕರ ಸಖ್ಯತೆ

ಸಿ.ಐ.ಟಿ.ಯು. ರೈತರ ಮತ್ತು ಕೃಷಿ-ಕಾರ್ಮಿಕರ ಐಕ್ಯಮತ್ಯದ ಸಂಬಂಧವನ್ನು ಪ್ರೋತ್ಸಾಹಿಸುವುದು. ಅವರ ಭೂಮಿ ಪಡೆಯುವ ಹೋರಾಟಗಳಿಗೆ, ಮತ್ತು ದುಬಾರಿ ಬಡ್ಡಿಯ ವಿರುದ್ಧ ಹಾಗೂ ಅಧಿಕ ತೆರಿಗೆಯ ವಿರುದ್ಧ ನಡೆಯುವ ಹೋರಾಟಗಳಿಗೆ ಸಿ.ಐ.ಟಿ.ಯು. ಬೆಂಬಲ ನೀಡುವುದು. ಸಿ.ಐ.ಟಿ.ಯು. ಕೃಷಿಕ್ರಾಂತಿಯ ಶಕ್ತಿಗಳಿಗೆ ಎಲ್ಲಾ ಸಹಾಯ ನೀಡುವುದು. ಕೃಷಿಕಾರ್ಮಿಕರ ವೇತನ ಹೆಚ್ಚಳಕ್ಕಾಗಿ ಮತ್ತು ಯೋಗ್ಯಜೀವನ ಸ್ಥಿತಿಗಾಗಿ ನಡೆಯುವ ಹೋರಾಟಗಳಿಗೆ ಸಂಪೂರ್ಣ ಬೆಂಬಲ ನೀಡುವುದು. ಪಾಳೆಯಗಾರಿ ಭೂಸಂಬಂಧವನ್ನು ಸಂಪೂರ್ಣವಾಗಿ ಕಿತ್ತೊಗೆಯದಿದ್ದರೆ, ದೊಡ್ಡ ಭೂಮಾಲಕರ ಏಕಸ್ವಾಮ್ಯವನ್ನು ಕೊನೆಗಾಣಿಸದಿದ್ದರೆ, ಶ್ರಮಿಕವರ್ಗದ ಆರ್ಥಿಕ ಪರಿಸ್ಥಿತಿ ಶಾಶ್ವತ ತಳಹದಿಯ ಮೇಲೆ ಸುಧಾರಿಸಲಾರದೆಂದು ಸಿ. ಐ. ಟಿ. ಯು. ನಂಬುವುದು. ವರ್ಗಹೋರಾಟವಿಲ್ಲದೆ ಯಾವುದೇ ಸಾಮಾಜಿಕ ಪರಿವರ್ತನೆಯನ್ನು ತರಲು ಸಾಧ್ಯವಿಲ್ಲ ಎಂಬ ವಸ್ತುಸ್ಥಿತಿಯನ್ನು ಸಿ. ಐ. ಟಿ. ಯು. ದೃಢವಾಗಿ ನಂಬುವುದು. ಶ್ರಮಿಕವರ್ಗವನ್ನು ವರ್ಗಮೈತ್ರಿಯ ಪಥದಲ್ಲಿ ಕೊಂಡೊಯ್ಯುವ ಎಲ್ಲಾ ಪ್ರಯತ್ನಗಳನ್ನು ಸತತವಾಗಿ ಹಿಮ್ಮೆಟ್ಟಿಸುವುದು.

ಅಂತರರಾಷ್ಟ್ರೀಯ ಐಕ್ಯತೆ ಸಖ್ಯತೆ

ಸಮಾಜವಾದಕ್ಕಾಗಿ ನಡೆಯುವ ಸಮಾನೋದ್ದೇಶಗಳ ಹೋರಾಟದಲ್ಲಿ ಸಿ.ಐ.ಟಿ.ಯು. ಇತರ ದೇಶಗಳ ಕೆಲಸಗಾರರೊಂದಿಗೆ ಅಂತರರಾಷ್ಟ್ರೀಯ ಐಕ್ಯತೆ ಮತ್ತು ಸೌಹಾರ್ದತೆಯನ್ನು ಪ್ರೋತ್ಸಾಹಿಸುವುದು. ಸಮಾಜವಾದಿ ರಾಷ್ಟ್ರಗಳ ಕೆಲಸಗಾರರೊಂದಿಗೆ ಮತ್ತು ಜನರೊಂದಿಗೆ ಭ್ರಾತೃತ್ವ ಸಂಬಂಧವನ್ನು ಮತ್ತು ಐಕ್ಯತೆಯ ಗಾಢ ಬಂಧನವನ್ನು ಪ್ರೋತ್ಸಾಹಿಸುವುದು. ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಗಳೊಂದಿಗೆ ಸಹಕರಿಸುವುದು.

ರಾಷ್ಟ್ರೀಯ ವಿಮೋಚನೆ, ಜಾಗತಿಕ ಶಾಂತಿ

ಸಾಮ್ರಾಜ್ಯಶಾಹಿಯ ಪ್ರಭುತ್ವ, ಪ್ರಭಾವ, ಆಕ್ರಮಣ ಹಾಗೂ ಮೇಲ್ಗೈಯ ವಿರುದ್ಧ ಹೋರಾಡಲು ಸಿ.ಐ.ಟಿ.ಯು. ಸಹಾಯ ಮಾಡುವುದು. ಸಾಮ್ರಾಜ್ಯಶಾಹಿಯ ವಿರುದ್ಧ ರಾಷ್ಟ್ರೀಯ ವಿಮೋಚನಾ ಸಮರಗಳಿಗೆ ಸರ್ವಸಹಾಯ ನೀಡುವುದು. ಜಾಗತಿಕ ಶಾಂತಿಗಾಗಿ ಹೋರಾಡುವುದು. ಸಾಮ್ರಾಜ್ಯಶಾಹಿಯ ಜಾಗತಿಕ ಯುದ್ಧವನ್ನು ಪುನಃ ಆರಂಭಿಸುವ ಎಲ್ಲಾ ಪಿತೂರಿಯ ವಿರುದ್ಧ ಮತ್ತು ಅಣುಯುದ್ಧದ ವಿರುದ್ಧ ಸಿ.ಐ.ಟಿ.ಯು. ಹೋರಾಡುವುದು. ಸಾರ್ವತ್ರಿಕ ವಿನಾಶಕ್ಕೆ ಕಾರಣವಾದ ಎಲ್ಲಾ ಅಣುಅಸ್ತ್ರಗಳನ್ನು ಮತ್ತು ಮಾರಕ ಅಸ್ತ್ರಗಳನ್ನು ರದ್ದುಗೊಳಿಸಲು ಪ್ರಚಾರ ಮಾಡುವುದು. ನೆರೆದೇಶಗಳೊಂದಿಗೆ ಮೈತ್ರಿ ಸಂಬಂಧ ಆಧರಿಸಿರುವ ವಿದೇಶಿ ನೀತಿಗೋಸ್ಕರ ಹೋರಾಡುವುದು.

ಪ್ರಜಾಸತ್ತಾತ್ಮಕ ಕಾರ್ಯವಿಧಾನ

ಸಿ.ಐ.ಟಿ.ಯು. ತನ್ನ ಉದ್ದೇಶ ಸಾಧಿಸಲು ಇತರ ಕೇಂದ್ರ ಸಂಘಟನೆಗಳೊಂದಿಗೆ ಮತ್ತು ಇತರ ಒಕ್ಕೂಟಕ್ಕೆ ಸೇರಿದ ಹಾಗೂ ಸೇರದ ಸಂಘಟನೆಗಳೊಂದಿಗೆ ಸಮಾನ ಧ್ಯೇಯೋದ್ದೇಶಗಳಿಗಾಗಿ ನಡೆಯುವ ಎಲ್ಲಾ ಹೋರಾಟಗಳಿಗೆ ಐಕ್ಯಮತ್ಯ ಸಾಧಿಸಲು ಅನವರತ ಪ್ರಯತ್ನಿಸುವುದು. ಸಿ.ಐ.ಟಿ.ಯು. ತನ್ನ ಧ್ಯೇಯೋದ್ದೇಶಗಳನ್ನು ಸಾಧಿಸಲು ಸಂಘಟನೆಯ ಎಲ್ಲಾ ಹಂತಗಳಲ್ಲಿಯೂ ಮತ್ತದರ ಅಂಗಸಂಸ್ಥೆಗಳಲ್ಲಿಯೂ ಪ್ರಜಾಸತ್ತಾತ್ಮಕ ಕಾರ್ಯವಿಧಾನ ಅಗತ್ಯ ಎಂದು ತಿಳಿಯುವುದು.

(ಸಂಗ್ರಹ : ರಾಂ)

ಸಂತೋಷದತ್ತ ಮುನ್ನಡೆ

ಬಡತನವು ಮಾನವ ಜೀವನದಲ್ಲೊಂದು ಕ್ರೂರ ಸಮಸ್ಯೆ ಆಗಿರುವದು. ನಿರುದ್ಯೋಗ ಹಾಗೂ ಅಲ್ಪ ಉದ್ಯೋಗದಿಂದ ಬಳಲುವ, ಭಾರತದ ಗ್ರಾಮಾಂತರ ಪ್ರದೇಶದಲ್ಲಿ ಅಧಿಕ ಸಂಖ್ಯೆಯಲ್ಲಿರುವ ಭೂರಹಿತ ಕಾರ್ಮಿಕರ ಹಾಗೂ ಚಿಕ್ಕಪುಟ್ಟ ರೈತರಿಗೆ ಖಾಯಂ ಉದ್ಯೋಗವನ್ನು ಕಲ್ಪಿಸಿ ಅವರ ಬಡತನವನ್ನು ನಿವಾರಿಸುವಲ್ಲಿ, ಅವರನ್ನು ಸ್ವಾವಲಂಬಿಗಳಾಗಿ ಅಭಿವೃದ್ಧಿಪಡಿಸುವಲ್ಲಿ ಬೀಡಿ ಉದ್ಯಮವು ಮಹತ್ತಾದ ಪಾತ್ರವನ್ನು ವಹಿಸುತ್ತದೆ.

ನಿಜ ಜಿಲ್ಲೆಯಾದ ದಕ್ಷಿಣ ಕನ್ನಡದಲ್ಲಿ "ಮಂಗಳೂರು ಪ್ರಕಾಶ ಬೀಡಿಗಳು" ಈ ಗ್ರಾಮೀಣ ಕಾರ್ಮಿಕರಿಗೆ ಉದ್ಯೋಗ ಕಲ್ಪಿಸುವದಷ್ಟೇ ಅಲ್ಲದೆ ಅವರ ಜೀವನ ಸುಧಾರಣೆಯತ್ತಲೂ ತನ್ನ ಕಿಂಚಿತ್ ಪಾತ್ರ ನಿರ್ವಹಿಸುತ್ತಿದೆ. ಮಾತ್ರವಲ್ಲ ಉದ್ಯಮದ ಪ್ರಗತಿಯಲ್ಲಿ ತಾವು ಸಕ್ರಿಯ ಪಾಲುಗಾರರೆಂಬ ಮನೋಭಾವವನ್ನು ತಾಳುವಂಥ ಅವಕಾಶವನ್ನು ಕಲ್ಪಿಸಿರುತ್ತವೆ. ಲಾಭಗಳಿಸುವಷ್ಟರಲ್ಲೇ ಹರ್ಷಿಸದೇ ಗಳಿಸಿದ ಲಾಭವನ್ನು ಕಾರ್ಮಿಕರ ಹಿತರಕ್ಷಣೆಗೆ ಉಪಯೋಗಿಸುವಲ್ಲಿ ಅತೀವ ಹರ್ಷಪಡುತ್ತದೆ.

ಈ ಧೋರಣೆಯಿಂದಲೂ ಪರಿಣಾಮವಾಗಿ ಕಾರ್ಮಿಕರ ವಿಪುಲ ಸಹಕಾರದಿಂದಲೂ ನಮ್ಮ ಉದ್ಯಮ ಬೆಳೆದಿದೆ. ಉದ್ಯಮದ ಬೆಳವಣಿಗೆಯ ಮೂಲಕ ಕಾರ್ಮಿಕರ ಸ್ಥಿತಿಗತಿಗಳೂ ಸುಧಾರಿಸಿವೆ. ಫಲರೂಪವಾಗಿ ನಮ್ಮ ಉತ್ಪನ್ನಗಳ ಗುಣಮಟ್ಟ ಹಾಗೂ ಬೆಲೆಮಟ್ಟಗಳನ್ನು ಕಾಪಾಡಿಕೊಳ್ಳುವುದು ಸಾಧ್ಯವಾಗಿರುತ್ತದೆ.

ಉದ್ಯೋಗಗಳನ್ನು ಕಲ್ಪಿಸುವಲ್ಲಿ ಉದ್ಯಮವನ್ನು ಬೆಳೆಸುವಲ್ಲಿ ನಮ್ಮ ಪಾತ್ರ ನಿಮಿತ್ತ ಮಾತ್ರದ್ದೆಂದು ನಾವೆಂದೂ ಮರೆಯಲಾರೆವು. ಪೋಷಕರಾದ ಸೇದುಗರು, ತಾವು ಉರಿಸುವ ಪ್ರತಿ ಒಂದು ಬೀಡಿಯೂ, ಗ್ರಾಮೀಣ ಗುಡಿಸಲೊಂದರಲ್ಲಿ, ಬಡ ಕುಟುಂಬ ಒಂದರ, ಬಾಳ ಬೆಳಕನ್ನು ಭವಿಷ್ಯದ ಆಶಾಜ್ಯೋತಿಯನ್ನು ಬೆಳಗಿಸುವತ್ತ ಸಹಕರಿಸುವುದೆಂದು ಮನಗಂಡಲ್ಲಿ, ನಮ್ಮ ಸಾಧನೆಗೆ ಗರಿಷ್ಠ ಪ್ರೋತ್ಸಾಹ ದೊರೆಯುವುದು. ಈ ಉದಾತ್ತ ಧೋರಣೆಯತ್ತ ಮುನ್ನಡೆಯಲು ಕಾರಣಕರ್ತರಾದ, ಪೋಷಕರಾದ ನಿಮಗೆಲ್ಲರಿಗೂ ಶುಭಾಶಯಗಳನ್ನರ್ಪಿಸುವೆವು.

ಪ್ರಕಾಶ್ ಬೀಡೀಸ್, ಲಿಮಿಟೆಡ್

ಕೊಡಿಯಾಲಬೈಲ್, ಮಂಗಳೂರು–575 003

1930–80 GOLDEN JUBILEE

FOR SHEER SMOKING .... INDAI'S FAMOUS

30

NUMBER THIRTY BRAND BEEDIES

Manufacturers :

BHARATH BEEDI WORKS PRIVATE LIMITED

BHARATH BAGH, KADRI ROAD
POST BOX NO. 730
MANGALORE-575003 (D.K)

Cable : 'THIRTYBIDI'

23330
23930
27830

ಸಂಘಟನೆ ಕುರಿತಂತೆ ಕೆಲವು ಪ್ರಶ್ನೆಗಳು

(3ನೇ ಪುಟದಿಂದ)

ಬೆಂಗಳೂರಿನಲ್ಲಿ ಮಾರ್ಚ್ 8, 1981ರಂದು ಅಶ್ಲೀಲ ಭಿತ್ತಿಪತ್ರ ಹರಿಯುವ ಚಳವಳಿಗೆ ಸಂಬಂಧದಲ್ಲಿ ಕೆಲವು ಸ್ತ್ರೀಸ್ವಾತಂತ್ರ್ಯವಾದಿಗಳು ತೋರಿದ ವರ್ತನೆಯು ಒಂದು ಉದಾಹರಣೆ ಇಲ್ಲಿ ತಿಳಿಸಲು ಯೋಗ್ಯವಾಗಿದೆ. CIEDS ಸಂಸ್ಥೆಯ ಮಾರ್ಗದರ್ಶನದಲ್ಲಿರುವ 'ವಿಮೋಚನಾ', ISU ಮಾರ್ಗದರ್ಶನದ 'ಮಹಿಳಾ ಸಂಘರ್ಷ ವೇದಿಕೆ', ಮಾಲಿನಿ ಎಂಬ ಇನ್ನೊಂದು ಸ್ವತಂತ್ರ ಗುಂಪು ಹಾಗೂ ಈ ಹಿಂದೆ ಇದ್ದ ದುಡಿಯುವ ಮಹಿಳೆಯರ ಸಮನ್ವಯ ಸಮಿತಿ ಇತ್ಯಾದಿಯವರೆಲ್ಲಾ ಸೇರಿ ಒಂದು ಸಮನ್ವಯ ಸಮಿತಿ ರಚಿಸಿ ಅಂತರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಲು ನಿರ್ಧರಿಸಿದವು. ಹೆಂಗಸರನ್ನು ಅಶ್ಲೀಲ ಭಂಗಿಗಳಲ್ಲಿ ತೋರಿಸುವ ಭಿತ್ತಿ ಪತ್ರಗಳನ್ನು ಹರಿದು ಹಾಕುವುದು ಇದರ ಒಂದು ಅಂಗವಾಗಿತ್ತು. ಈ ಗುಂಪುಗಳ ಸದಸ್ಯರು ಕ್ಯಾಮರಾದ ತೀವ್ರ ಪ್ರಕಾಶದೆದುರು ಬ್ರಿಗೇಡ್ ರೋಡ್‌ನ ಸುತ್ತ ಮುತ್ತ ಹೋದರು. ಒಂದು ಕಡೆ ಅವರು ತೀವ್ರ ವಿರೋಧವನ್ನೆದುರಿಸಬೇಕಾಯ್ತು. ಒಂದು ಥಿಯೇಟರಿನ ಕೆಲಸಗಾರ ಪೋಸ್ಟರ ಹರಿಯುವುದನ್ನು ವಿರೋಧಿಸಿದ. ಆ ಭಿತ್ತಿ ಪತ್ರಗಳು ಅಶ್ಲೀವಾಗಿವೆ, ಹೆಂಗಸರು ಸಾಮಾನ್ಯವಾಗಿ ಮುಚ್ಚಿಕೊಳ್ಳುವ ಭಾಗಗಳನ್ನು ಅವು ಪ್ರದರ್ಶಿಸುತ್ತಿವೆ ಎಂದಿತ್ಯಾದಿಯಾಗಿ ಸ್ತ್ರೀ ಸ್ವಾತಂತ್ರ್ಯವಾದಿಗಳು ವಾದಿಸಿದರು. ಪೋಸ್ಟರುಗಳನ್ನು ಹರಿಯುವ ಆ ಸದಸ್ಯರೇ ತಮ್ಮ ದೇಹಗಳನ್ನು ಅಶ್ಲೀಲವಾಗಿ ಪ್ರದರ್ಶಿಸುತ್ತಿದ್ದಾರೆ ಎಂದು ಆ ಕೆಲಸಗಾರ ಕೂಡಲೇ ಪ್ರತ್ಯುತ್ತರಕೊಟ್ಟ. ಆ ಕೆಲಸಗಾರ ಗೆದ್ದ. ಸ್ತ್ರೀ ಸ್ವಾತಂತ್ರ್ಯವಾದಿಗಳು ಹಿಮ್ಮೆಟ್ಟಿದರು. ಈ ಸ್ತ್ರೀ ಸ್ವಾತಂತ್ರ್ಯವಾದಿಗಳಿಂದಾಗಿ ಇತರ ಮಹಿಳಾ ಕಾರ್ಯಕರ್ತರು ತಮ್ಮ ಚಳುವಳಿಯ ಬಗ್ಗೆಯೇ ಜುಗುಪ್ಸೆ ಹಾಗೂ ಅವಮಾನಪಡುವಂತಾದುದು ಸ್ವಾಭಾವಿಕವೇ.

ಅಮೇರಿಕ ಸಂಯುಕ್ತ ಸಂಸ್ಥಾನದಲ್ಲಿ ಸ್ತ್ರೀಸ್ವಾತಂತ್ರ್ಯವಾದಿಗಳ ಚಟುವಟಿಕೆಗಳು

ಅಮೇರಿಕ ಸಂಯುಕ್ತ ಸಂಸ್ಥಾನದಲ್ಲಿ ಸ್ತ್ರೀ ಸ್ವಾತಂತ್ರ್ಯವಾದೀ ಚಳುವಳಿ ಮಹಿಳೆಯರಿಗೆ ಮತದಾನದ ಹಕ್ಕು ಕೊಡಬೇಕೆಂಬ ಚಳುವಳಿಯೊಂದಿಗೆ ಜತೆಜತೆಯಾಗಿ ಬೆಳೆಯಿತು. ಈಗಲೂ ಒಬ್ಬ ಮಹಿಳೆ ಅಮೇರಿಕಾದ ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸುವಂತಿಲ್ಲ ಎಂದು ಬೇರೆಹೇಳಬೇಕಾಗಿಲ್ಲ. ನಮ್ಮ ದೇಶದ ಸ್ಥಿತಿಯೇ ಬೇರೆ. ನಮ್ಮ ಮಹಿಳೆಯರಿಗೆ ಮತದಾನದ ಹಕ್ಕಿದೆ-ಅದನ್ನು ರಾಜಕೀಯವಾಗಿ ಚಲಾಯಿಸಲು ಪುರುಷರಿಗೆ ಸಾಧ್ಯವಾದಷ್ಟೇ ಅವರಿಗೂ ಸಾಧ್ಯ ಎಂಬುದು ಬೇರೆಮಾತು. ಕನಿಷ್ಟ ಅಮೇರಿಕಾದಂತೆ ಅಧ್ಯಕ್ಷತೆಗೆ ಸ್ಪರ್ಧಿಸುವ ಅನರ್ಹತೆಯಂತೂ ಭಾರತದಲ್ಲಿ ಇಲ್ಲ. ನಾವು ಮಹಿಳಾ ಪ್ರಧಾನಮಂತ್ರಿಯನ್ನು ಪಡೆದಿದ್ದೇವೆ. ಆಕೆ ಮಹಿಳಾ ಅಧ್ಯಕ್ಷೆಯಾಗುವ ಆಸೆಯನ್ನೂ ಹೊಂದಿದ್ದಾರೆ.

ಇದೇರೀತಿ, ಅಮೇರಿಕಾದ ಸ್ವಾತಂತ್ರ್ಯವಾದಿಗಳು ಮಕ್ಕಳಿಗೆ ಹಗಲು ಪಾಲನೆ ಕೇಂದ್ರ (Day Care Centres)ಗಳ ಸ್ಥಾಪನೆಗಾಗಿ ಚಳುವಳಿ ನಡೆಸುತ್ತಿದ್ದಾರೆ. ಅಮೇರಿಕಾದ ಕೆಲವು ರಾಜ್ಯಗಳಲ್ಲಿ ಇಂತಹ ಕೇಂದ್ರಗಳನ್ನು ಸಂಘಟಿಸುವುದು ಕಾನೂನು ಬಾಹಿರ. ಈ ರೀತಿಯ ಕೇಂದ್ರಗಳನ್ನು ಸಂಘಟಿಸುವುದು ಅಥವಾ ಶಿಶುವಿಹಾರಗಳನ್ನು ನಡೆಸುವುದು ಭಾರತದಲ್ಲಿ ಕಾನೂನುಬಾಹಿರವಾಗಿಲ್ಲ. ಮಾತ್ರವಲ್ಲ, ಐವತ್ತಕ್ಕಿಂತ ಹೆಚ್ಚು ಜನರನ್ನು ನೌಕರಿಗಿಟ್ಟುಕೊಂಡ ಕಾರ್ಖಾನೆಗಳಲ್ಲಿ ಇವುಗಳು ಕಾನೂನುಪ್ರಕಾರ ಇರಲೇಬೇಕು. ಅಮೇರಿಕಾ ಹಾಗೂ ಇಲ್ಲಿಯ ಸ್ತ್ರೀ ಸ್ವಾತಂತ್ರ್ಯವಾದಿಗಳು ಗರ್ಭಧರಿಸುವುದಿಲ್ಲ ಅಥವಾ ಮಕ್ಕಳನ್ನು ಹಡೆಯುವುದಿಲ್ಲ ಎಂದು ವಾದಹೂಡುವವರೆಗೆ ಹೋಗಿದ್ದಾರೆ. ಪ್ರತಿಯೊಬ್ಬ ಮಹಿಳೆಗೆ ಗರ್ಭಧರಿಸದೇ ಇರುವ ಅಥವಾ ಮಕ್ಕಳನ್ನು ಹಡೆಯುವ ಜವಾಬ್ದಾರಿಯಿಂದ ಮುಕ್ತವಾಗುವ ಸ್ವಾತಂತ್ರ್ಯವಿರಬೇಕು. ಆದರೆ ಅದನ್ನೇ ಒಂದು ಪಂಥವಾಗಿ ಬೆಳೆಸುವುದು ಹಾಸ್ಯಾಸ್ಪದ. ಮಗುವನ್ನು ಬೆಳೆಸುವ ಸಂಕಷ್ಟಗಳನ್ನು ಸಮಾಜವಾದೀ ದೇಶಗಳಲ್ಲಿ ಮಾಡಿರುವಂತೆ ನಿವಾರಿಸಬಹುದು. ಆದರೆ ಮಗು ಹಡೆಯುವುದು ಸ್ವಾಭಾವಿಕ. ತಾಯಿಯಾಗುವುದು ಹಲವು ಮಹಿಳೆಯರಿಗೆ ಆನಂದದ ಸಂಗತಿ. ತಾಯ್ತನದ ವಿರುದ್ಧವೇ ಪ್ರಚಾರ ನಡೆಸುವುದು ಮೂರ್ಖತನದ ಕ್ರಮ.

ಅಮೇರಿಕಾದ ಸ್ತ್ರೀ ಸ್ವಾತಂತ್ರ್ಯವಾದಿಗಳು ಮಹಿಳೆಯರನ್ನು ಉದ್ಯೋಗಕ್ಷೇತ್ರದ ಎರಡನೇ ಸ್ತರದ ಹಾಗೂ ಸೇವಾವಿಭಾಗದ ನೌಕರಿಗಳಿಗೆ ಮಾತ್ರ ನೇಮಿಸಿಕೊಳ್ಳುವುದರ ವಿರುದ್ಧ ಪ್ರಚಾರ ನಡೆಸುತ್ತಿದ್ದಾರೆ. ಸಮಾಜವಾದಿ ದೇಶಗಳಲ್ಲಿ ಮಾತ್ರ ಇಂತಹ ಅನರ್ಹತೆಯನ್ನು ನಿವಾರಿಸಲಾಗಿದೆ. ಅಲ್ಲಿ ಮಹಿಳೆಯರು ಉತ್ತಮ ಉಚ್ಚಶಿಕ್ಷಣವನ್ನು ಪಡೆಯುತ್ತಿದ್ದಾರೆ. ಇಂತಹ ಪ್ರಚಾರವನ್ನು ಭಾರತದಲ್ಲಿ ನಡೆಸುವುದಕ್ಕೆ ಅಭ್ಯಂತರವಿಲ್ಲ.

ಸ್ತ್ರೀ ಸ್ವಾತಂತ್ರ್ಯವಾದಗಳು ಪಂಥವಾದಿಗಳು

ಭಾರತದಲ್ಲಿ ಮಹಿಳೆಯನ್ನು ಸಂಘಟಿಸುವಲ್ಲಿ ಸ್ತ್ರೀ ಸ್ವಾತಂತ್ರ್ಯವಾದಿಗಳ ಸಂಕುಚಿತ ಪಂಥವಾದೀ ಧೋರಣೆಗಳು ಹಾಗೂ ವರ್ತನೆಗಳು ಮಹಿಳೆಯರ ವ್ಯಾಪಕ ಚಳುವಳಿಯನ್ನು ಬೆಳೆಸುವುದರ ವಿರುದ್ಧ ಕೆಲಸಮಾಡುತ್ತವೆ ಎಂಬುದು ಖಂಡಿತ. ತಮ್ಮ ತಪ್ಪು ಧೋರಣೆಗಳ ಪರಿಣಾಮಗಳನ್ನು ಪ್ರಾಮಾಣಿಕವಾಗಿ ಅರ್ಥಮಾಡಿಕೊಳ್ಳುವ ಸ್ತ್ರೀ ಸ್ವಾತಂತ್ರ್ಯವಾದಿಗಳು ಪ್ರಜಾಪ್ರಭುತ್ವವಾದೀ ಮಹಿಳೆಯರ ಸಂಘದೊಡನೆ ಸಹಕರಿಸಿ ಮಹಿಳೆಯರ ಪ್ರಗತಿಯಲ್ಲಿ ಖಂಡಿತವಾಗಿಯೂ ಸಹಾಯಮಾಡಬಹುದು. ಅಮೇರಿಕಾ ಸಂಯುಕ್ತ ಸಂಸ್ಥಾನಗಳಿಂದ ಆಮದಾಗುವ ಎಲ್ಲಾ ಮತ ಸಂಪ್ರದಾಯಗಳು ಅದು ಹಿಪ್ಪೀಪಂಥವಾಗಲಿ, ನವಎಡಪಂಥವಿರಲಿ, ಅಥವಾ ಸ್ತ್ರೀ ಸ್ವಾತಂತ್ರ್ಯವಾದಿಗಳೇ ಇರಲಿ ಅವೆಲ್ಲದರ ಸೈದ್ಧಾಂತಿಕ ಹಾಗೂ ಸಂಘಟನಾತ್ಮಕ ಹರಹು ಇರುವುದು ಒಂದು ಸಾಚಾ ಎಡ ಹಾಗೂ ಪ್ರಜಾಪ್ರಭುತ್ವವಾದೀ ಚಳುವಳಿಯಲ್ಲಿ ಒಡಕು ತರುವುದಕ್ಕಾಗಿಯೇ. ಪಕ್ಷದ ಸದಸ್ಯರು, ಹಿತಚಿಂತಕರು, ಹಾಗೂ ಎಡ ಮತ್ತು ಪ್ರಜಾಪ್ರಭುತ್ವವಾದೀ ಚಳುವಳಿಯ ಗೆಳೆಯರು ತಮ್ಮ ಚಳುವಳಿಯನ್ನು ಯಾವುದೇ ಮೂಲೆಯಿಂದ ಅಥವಾ ಯಾವುದೇ ವೇಷದಲ್ಲಿ ಬರುವ ವಿಚ್ಛಿದ್ರಕಾರಿಗಳ ಚಟುವಟಿಕೆಗಳಿಂದ ರಕ್ಷಿಸಿಕೊಳ್ಳಬೇಕು.

○

ಬಂಡಾಯ ಸಾಹಿತ್ಯ; ಸಮಾಜವಾದಿ ವಾಸ್ತವತೆ

(4ನೇ ಪುಟದಿಂದ)

ಕೊಂಡಿರುವ ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ಪ್ರಜಾಪ್ರಭುತ್ವವಾದಿಗಳೆಲ್ಲ ಒಟ್ಟಿಗೇ ಚಳುವಳಿ ಕಟ್ಟಬೇಕು.

ಸಾಂಸ್ಕೃತಿಕ ರಂಗದಲ್ಲಿ ನಮ್ಮದು ವಿಶಿಷ್ಟ ಮಿಶ್ರಣದ 'ಹೈಬ್ರೀಡ್ ಸಂಸ್ಕೃತಿ' ಇದೆ; ಒಂದು-ಪ್ರತಿಗಾಮಿ ಸಿದ್ಧಾಂತವನ್ನು ವೈಭವೀಕರಿಸುವುದು 2) ಇನ್ನೊಂದು ಪಾಶ್ಚಿಮಾತ್ಯ ಸಾಮ್ರಾಜ್ಯವಾದಿ ಸಂಸ್ಕೃತಿಯನ್ನು ಪ್ರತಿಷ್ಠಾಪಿಸುತ್ತಿರುವವ ಈ ಎರಡರ ವಿಚಿತ್ರ ಮಿಶ್ರಣ ನಮ್ಮಲ್ಲಿದೆ. ಜನರು ಎಚ್ಚರಗೊಂಡಂತೆ ಇಂತಹ ಪ್ರತಿಷ್ಠಿತ ಶಕ್ತಿಗಳು ಮಣ್ಣು ಮುಕ್ಕುತ್ತ ನಡೆಯುತ್ತವೆ. ಜನತೆ ಯಾವುದೇ ಭಾಗದಲ್ಲಿ ಎಚ್ಚರಾಗುತ್ತಿದ್ದರೂ ಅದನ್ನು ಭಾರತ ದೇಶದ ಜನತೆಯೆಲ್ಲಾ ಗಮನಿಸುತ್ತಿರುತ್ತದೆ. ಉಳಿದೆಡೆ ಆಗುತ್ತಿರುವ ಎಚ್ಚರವನ್ನು ಕರ್ನಾಟಕವೂ ಗಮನಿಸುತ್ತಿದೆ. ಜನತೆಯಲ್ಲಿ ಪ್ರಜ್ಞೆ ಮೂಡಿಸುವುದು ಯಾರೊಬ್ಬರ ಮನಾಪಲಿ ಅಲ್ಲ. ವಾಸ್ತವವನ್ನು ನೋಡುವ ಸಾಹಿತಿಯೇ ಕ್ರಾಂತಿಕಾರಿ ಆಗುತ್ತಾನೆ. ನಾವೆಲ್ಲ ಬೆಳೆಯುವುದು ಚರ್ಚೆಯಿಂದ; ಸ್ವವಿಮರ್ಶೆಯಿಂದ. ನಮ್ಮಷ್ಟಕ್ಕೆ ನಾವು ಗೋಡೆ ಕಟ್ಟಿಕೊಂಡರೆ ಅಷ್ಟರ ಮಟ್ಟಿಗೆ ನಾವು ಜೀವನದಿಂದ ವಂಚಿತರಾಗುತ್ತೇವೆ. ಬಂಡಾಯದ ಕಿಡಿಯನ್ನು ಮುಂದುವರಿಸಿಕೊಂಡು ಹೋಗಬೇಕಾದರೆ ಹೆಚ್ಚು ಹೆಚ್ಚು ಜನರನ್ನು ಅದು ಒಳಗೊಳ್ಳಬೇಕಾಗುತ್ತದೆ. ಇಲ್ಲಿಯ ದುಡಿಯುವ ಜನ, ದಲಿತರು, ಪ್ರಗತಿಪರರು ಕೂಡಿ ಹೋರಾಟ ಮಾಡಲಾರದೆ ಹೋದರೆ ಬಹುಮುಖ್ಯವಾದ ಹೊಣೆಯೊಂದರಿಂದ ನಾವು ತಪ್ಪಿಸಿಕೊಂಡಂತಾಗುತ್ತದೆ. ಚರಿತ್ರೆಯಲ್ಲಿ ನಮ್ಮ ಕರ್ತವ್ಯ ಸಾಕಷ್ಟಿದೆ. ಕ್ರಾಂತಿಕಾರಿ ಜವಾಬ್ದಾರಿಯನ್ನು ಮುಂದುವರಿಸಿಕೊಂಡು ಹೋಗಬೇಕಾದ ಮಹತ್ತರ ಜವಾಬ್ದಾರಿ ನಮ್ಮ ಮೇಲಿದೆ.

●

ಮಹಿಳೆಯರ ಹೋರಾಟದ ಅಂತಿಮ ಗುರಿ ಕುರಿತು

ಕಾಂ. ಕನಕ್ ಮತ್ತು ಸುಶೀಲಾ ಸ್ಪಷ್ಟನೆ

ವರದಕ್ಷಿಣೆ ಕುರಿತ ಸಾರ್ವಜನಿಕ ಅಭಿಪ್ರಾಯ ಸಂಗ್ರಹಕ್ಕೆ ಕೇಂದ್ರವು ನೇಮಿಸಿರುವ ಸಮಿತಿಯ ಸದಸ್ಯರಾಗಿರುವ ಕಾಂ. ಸುಶೀಲಾಗೋಪಾಲನ್ ಮತ್ತು ಕಾಂ. ಕನಕ್ ಮುಖರ್ಜಿ ಅವರು 26-5-81ರಂದು ಬೆಂಗಳೂರಿನಲ್ಲಿ ಒಂದು ಸಣ್ಣ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಹಲವಾರು ದಶಕಗಳಿಂದಲೂ ಪಕ್ಷದ ಸಂಘಟನೆಗಳಲ್ಲಿ ಸಕ್ರಿಯವಾಗಿ ದುಡಿಯುತ್ತಿರುವ ಈ ಇಬ್ಬರೂ ಸಹಜವಾಗಿ, ಮಹಿಳೆಯರ ಕೆಲವು ಸಮಸ್ಯೆಗಳನ್ನು ಕುರಿತು, ಅವರ ಹೋರಾಟದ ಗುರಿಯನ್ನು ಕುರಿತು ಮಾತನಾಡಿದರು.

ಮೊದಲು ತಮ್ಮ ಅನುಭವಗಳನ್ನು ಹೇಳಿಕೊಂಡ ಕಾಂ. ಕನಕ್ ಮುಖರ್ಜಿ ಅವರು, ಮಹಿಳೆಯರ ಹೋರಾಟಕ್ಕೆ ಎರಡು ರೀತಿಯ ಉದ್ದೇಶಗಳಿರುತ್ತವೆ – ತತ್‌ಕ್ಷಣದ ಅಗತ್ಯಗಳು ಮತ್ತು ಅಂತಿಮ ಗುರಿಗಳು–ಇವೆರಡೂ ತುಂಬ ಮುಖ್ಯ. ತತ್‌ಕ್ಷಣದ ಅಗತ್ಯಗಳಾದ ಕೆಲವು ಸವಲತ್ತುಗಳ ಬಗ್ಗೆ ಹೋರಾಟ ನಡೆಸಿದರೂ ಅಂತಿಮಗುರಿಯಾದ ಸಮಾಜ ಬದಲಾವಣೆಯ ಬಗ್ಗೆ ಗಮನ ಇಟ್ಟಿರಲೇಬೇಕು, ಅದೇ ಮುಖ್ಯ ಎಂದು ಹೇಳಿದರು. ಕಾನೂನಿನಲ್ಲಿ ಎಲ್ಲರೂ ಸಮಾನರೇ. ಆದರೆ ನಿಜವಾದ ಸಮಾನತೆ ಬರಬೇಕಾದರೆ ಸಮಾಜ ಬದಲಾಗ[illegible]. ಸಮಸ್ಯೆಯ ಬೇರುಗ[illegible]ಕ್ಕೆ ಇಳಿದು ಪರಿಶೀಲಿಸ[illegible]. ಇದೆ, ನಮಗೂ, [illegible] ಮಹಿಳಾ ಸಂಘಟನೆಗಳಿಗೂ ಇರುವ ವ್ಯತ್ಯಾಸ, ಸಮಸ್ಯೆಗಳನ್ನು ನಾವು ಸಾಮಾಜಿಕ ದೃಷ್ಟಿಕೋನದಿಂದ ನೋಡುತ್ತೇವೆ, ಪ್ರತ್ಯೇಕವಾಗಿ ನೋಡುವುದಿಲ್ಲ, ಎಂದು ಕಾಂ. ಕನಕ್ ಮುಖರ್ಜಿ ಹೇಳಿದರು.

ಈ ವ್ಯವಸ್ಥೆ ಒಂದು ವಿಷವರ್ತುಲ. ಸಮಸ್ಯೆಗಳ ನಿರ್ಬಂಧಕ್ಕೆ ಅದು ಕಾನೂನನ್ನೂ ಮಾಡುತ್ತದೆ. ಆದರೆ ಅಂಥ ಸಮಸ್ಯೆಗಳು ಹುಟ್ಟುವ ವಾತಾವರಣವನ್ನು ತಾನೇ ಪೋಷಿಸುತ್ತದೆ. ಎಂದು ವಿಶ್ಲೇಷಿಸಿದ ಕನಕ್ ಮುಖರ್ಜಿ ಅವರು, ಚಳುವಳಿಯ ಬಗ್ಗೆ ಓದಿ, ತಿಳಿದುಕೊಳ್ಳಿ, ಚರ್ಚಿಸಿ ಎಂದು ಕರ್ನಾಟಕದ ಮಹಿಳೆಯರಿಗೆ ಹಿತವಚನ ನೀಡಿದರು.

ನಂತರ ಮಾತನಾಡಿದ ಕಾಂ. ಸುಶೀಲಾ ಗೋಪಾಲನ್ ಅವರು ಕೇರಳದ ಮಹಿಳೆಯರ ಟ್ರೇಡ್‌ಯೂನಿಯನ್ ಸಂಘಟನೆಯಲ್ಲಿನ ತಮ್ಮ ಅನುಭವಗಳನ್ನು ವಿವರಿಸಿದರು. ಮಹಿಳೆಯ ಸ್ವಾತಂತ್ರ್ಯಕ್ಕೂ ಆರ್ಥಿಕತೆಗೂ ಸಂಬಂಧ ಇದೆ. ಆದರೆ ಮಹಿಳೆಯರ ಉದ್ಯೋಗದ ಪ್ರಮಾಣ ಈಗ ಕಡಿಮೆಯಾಗುತ್ತಿದೆ ಎಂದು ಅವರು ವಿಷಾದಿಸಿದರು. ಬೋನಸ್ ಮುಂತಾದವನ್ನು ಹೊಡೆದಾಡಿ ಪಡೆಯುವ ಟ್ರೇಡ್‌ಯೂನಿಯನ್ ಕಾನೂನಿನಲ್ಲಿ ನಮೂದಾಗಿರುವ ಮಹಿಳೆಯರ ಹಕ್ಕುಗಳ ಬಗ್ಗೆ ಹೋರಾಡುತ್ತಿಲ್ಲ ಎಂದರು.

ಮಹಿಳೆಯರಲ್ಲಿ ಕೆ[illegible]ಟದ [illegible]ಬೇಕು. ಒಂದು ಪ್ರಜ್ಞೆಯನ್ನು ಹೊ[illegible] ಬಾರಿ [illegible]ರು ಸಂಕೋಲೆಗಳಿಂದ [illegible]ರಬಂದರೆಂದರೆ ಸಾಕು, ಉಜ್ವಲ ಹೋರಾಟಗಾರರಾಗಿಬಿಡುತ್ತಾರೆ. "ಗಂಡಸು ಬದಲಾದರೆ ಅವನೊಬ್ಬನೇ ಬದಲಾಗುತ್ತಾನೆ. ಹೆಂಗಸು ಬದಲಾದರೆ ಇಡೀ ಕುಟುಂಬ ಬದಲಾಗುತ್ತದೆ" ಎಂಬ ಮಾತು ನಿಜ. ಇಡೀ ಸಮಾಜದ ವಿಮೋಚನೆ ಮಹಿಳಾ ಹೋರಾಟದ ಗುರಿಯಾಗಬೇಕು ಎಂದು ಸುಶೀಲಾ ಗೋಪಾಲನ್ ಅಭಿಪ್ರಾಯ ಪಟ್ಟರು.

●

ತೋಟ ಕಾರ್ಮಿಕರ ನಾಲ್ಕನೆಯ ರಾಜ್ಯ ಸಮ್ಮೇಳನ

ಕರ್ನಾಟಕ ಪ್ರಾವಿನ್ಷಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್, ಚಿಕ್ಕಮಗಳೂರು, ಕೂರ್ಗ್ ಡಿಸ್ಟ್ರಿಕ್ಟ್ ಜನರಲ್ ವರ್ಕರ್ಸ್ ಯೂನಿಯನ್, ವೀರಾಜಪೇಟೆ, ಕರ್ನಾಟಕ ತೋಟ ಕಾರ್ಮಿಕರ ಸಂಘ, ಸಕಲೇಶಪುರ, ತೋಟ ಕೆಲಸಗಾರರ ಸಂಘ, ಸುಳ್ಯ ಈ ನಾಲ್ಕು ಕಾರ್ಮಿಕ ಸಂಘಗಳ ಪದಾಧಿಕಾರಿಗಳ ಮತ್ತು ಕಾರ್ಯಕರ್ತರ ಜಂಟಿಸಭೆಯು ಚಿಕ್ಕಮಗಳೂರಿನಲ್ಲಿ ತಾ 18-5-1981ರಂದು ನಡೆಯಿತು. ಕಾಂ. ಪಿ. ರಾಮಚಂದ್ರರಾಯರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

ಕಾಂ. ಸಿ. ನಂಜುಂಡಪ್ಪನವರು 20-1-1981ರಂದು ನಡೆದ ತೋಟ

ಕಾರ್ಮಿಕರ ಐಕ್ಯಮುಷ್ಕರ, ತರುವಾಯದ ಬೆಳವಣಿಗೆಗಳು ಮತ್ತು ಪ್ರಸ್ತುತ ಪರಿಸ್ಥಿತಿಯ ಬಗ್ಗೆ ವರದಿ ಮಾಡಿದರು.

ದಿವಾಕರ್, ಕೆ. ಸುಕುಮಾರ್, ಕುಟ್ಟಪ್ಪನ್, ಕಾಂತಮುತ್ತು ಎ. ಸಿ. ಕೇಶವ, ಪಿ.ಕೆ.ಎ. ಲತೀಫ್ ವಿ. ಸುಕುಮಾರ್ ಮೊದಲಾದವರು ಮಾತನಾಡಿದರು.

ತೋಟಕಾರ್ಮಿಕರ ಬೇಡಿಕೆಗಳ ಬಗ್ಗೆ ಸತತವಾದ ಪ್ರಚಾರಪ್ರಕ್ಷೋಭೆಗಳನ್ನು ನಡೆಸುವ, ಕೊಡಗಿನಲ್ಲಿ ಪ್ಲಾಂಟೇಷನ್ ಕಾರ್ಮಿಕರ ನಾಲ್ಕನೆಯ ರಾಜ್ಯ ಸಮ್ಮೇಳನವನ್ನು ನಡೆಸುವ, ಈ ನಾಲ್ಕು ಸಂಘಗಳ ಕಾರ್ಯಕರ್ತರ ಒಂದು ಶಿಬಿರವನ್ನು ಹಾಸನ ಜಿಲ್ಲೆಯಲ್ಲಿ ನಡೆಸುವ ತೀರ್ಮಾನಗಳಾದುವು.

●

ಕಾಂಗ್ರೆಸ್ (ಯು)ಗೆ ಚವ್ಹಾಣ್ ರಾಜೀನಾಮೆ

(1ನೇ ಪುಟದಿಂದ)

ಈ ಅವಧಿಯಲ್ಲಿ ಇಂದಿರಾರನ್ನು ಟೀಕಿಸಿ ದೂರಸರಿದವರಲ್ಲಿ ಚವಾಣ, ರೆಡ್ಡಿ, ಸ್ವರಣಸಿಂಗ್ ಮೊದಲಾದವರು ಪ್ರಮುಖರು. ಆಗ ಇಂದಿರಾರೊಟ್ಟಿಗೆ ಇದ್ದು, ಇಂದಿರಾರಿಗೆ ರಾಜಕೀಯ ಮರುಹುಟ್ಟು ಒದಗಿಸಲು ಶ್ರಮಿಸಿದ ದೇವರಾಜ್ ಅರಸರೂ ಏಕವ್ಯಕ್ತಿಯ ಸರ್ವಾಧಿಕಾರವನ್ನು ಪ್ರತಿಭಟಿಸಿ ಇಂದಿರಾರಿಂದ ದೂರಸರಿದರು.

ಹೊಸ ಆಕಾಂಕ್ಷೆಗಳ ಸಂಕೇತವಾಗಬೇಕಿದ್ದ ಜನತಾಪಕ್ಷವೂ ತಮ್ಮತಮ್ಮಲ್ಲಿ ಹೊಡೆದಾಡಿಕೊಂಡ ಕಾರಣ ಒಡೆದು ಹೋಯಿತು. ಇಂದಿರಾ ಅನುಸರಿಸಿದ್ದ ಆರ್ಥಿಕ-ಸಾಮಾಜಿಕ ಧೋರಣೆಗಳಿಗೂ, ಜನತಾ ಅನುಸರಿಸಿದ ಧೋರಣೆಗಳಿಗೂ ಏನೇನೂ ವ್ಯತ್ಯಾಸವಿರಲಿಲ್ಲ. ತಮ್ಮ ಹುಚ್ಚಾಟಗಳಿಂದ ಸರ್ವಾಧಿಕಾರಿ ಶಕ್ತಿಗಳು ಬಲಿಯಲು ಅವಕಾಶಕೊಡುತ್ತಿದ್ದುದರ ಬಗ್ಗೆ ಜನತಾಪಕ್ಷಕ್ಕೆ ಎಡಪಕ್ಷಗಳು ಎಚ್ಚರಿಕೆ ಕೊಡುತ್ತಲೇ ಇದ್ದವು. ಮತ್ತೆ ಭಾರತದ ರಾಜಕಾರಣದಲ್ಲಿ ಇಂದಿರಾರ ಪ್ರವೇಶವಾಯಿತು.

ಮತ್ತೆ ಇಂದಿರಾ ಅಧಿಕಾರಕ್ಕೆ ಬಂದರು. ಅವರನ್ನು ಹೀನಾಮಾನವಾಗಿ ಟೀಕಿಸಿದ ನಾಯಕರು ಒಬ್ಬೊಬ್ಬರಾಗಿ ಅವರನ್ನು ಸೇರಿದರು. ಈಗ ಚವಾಣರ ಸರದಿ.

ದೇಶದಲ್ಲಿ ಜನತೆ ಹೋರಾಟಕ್ಕೆ ತೊಡಗಿದ್ದಾರೆ. ಸರಕಾರದ ದಿವಾಳಿಖೋರ ಆರ್ಥಿಕ ನೀತಿಯಿಂದ ಪರಿಸ್ಥಿತಿ ಹದಗೆಡುತ್ತಿದೆ. ಜನತೆ ಕಂಗೆಟ್ಟಿದ್ದಾರೆ. ರಾಷ್ಟ್ರದ ಸಮಸ್ಯೆಗಳನ್ನು ಎದುರಿಸುವಲ್ಲಿ ಇಂದಿರಾ ಸಂಪೂರ್ಣ ವಿಫಲರಾಗಿದ್ದಾರೆ. ಕಾಂಗ್ರೆಸ್ಸಿನಲ್ಲಿ ಉಳಿದಿರುವ ನಾಯಕರು ವಿಮರ್ಶೆ ಮಾಡಿಕೊಳ್ಳಬೇಕು. ಅಧಿಕಾರಕ್ಕೆ ಹಾತೊರೆಯದೇ ಎಡ-ಪ್ರಜಾಪ್ರಭುತ್ವ ಶಕ್ತಿಗಳು ಜತೆಯಾಗಿ ನಿಂತು ಸರ್ವಾಧಿಕಾರಿ ಶಕ್ತಿಗಳನ್ನು ಎದುರಿಸಬೇಕು. ಜನತೆಗೆ ನಿಜವಾದ ಪರ್ಯಾಯ ಒದಗಿಸುವಲ್ಲಿ ಮುಂದಾಗಬೇಕು.

ಚವಾಣರಂತಹ ಬಹುಮುಖವೇಶದ ರಾಜಕಾರಣಿಗಳಿಗೆ, ಜನತೆಯ ವಿಶ್ವಾಸದೊಂದಿಗೆ ಚೆಲ್ಲಾಟವಾಡಿರುವ ಈ ಭ್ರಷ್ಟರಿಗೆ ಜನತೆಯೇ ಸೂಕ್ತ ಪಾಠಕಲಿಸಬೇಕು. ಹೆಚ್ಚುತ್ತಿರುವ ಆರ್ಥಿಕ ಬಿಕ್ಕಟ್ಟನ್ನು ಪರಿಹರಿಸುವಲ್ಲಿ ಈಗಾಗಲೇ ಶೋಚನೀಯವಾಗಿ ವಿಫಲರಾಗಿರುವ ಇಂದಿರಾರು ಮತ್ತೊಂದು ತುರ್ತುಪರಿಸ್ಥಿತಿ ಹೇರುವ ಸಾಧ್ಯತೆ ಇದೆ. ಈ ದುಷ್ಟ ಫ್ಯಾಸಿಸ್ಟ್ ಶಕ್ತಿಗಳು ಮತ್ತೊಮ್ಮೆ ಚೆಲ್ಲಾಟವಾಡಲು ಖಂಡಿತ ಅವಕಾಶ ಕೊಡಕೂಡದು.

ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ನಾಗರೀಕ ಸ್ವಾತಂತ್ರ್ಯಗಳಿಗಾಗಿ ಹೋರಾಡಲು ಕರೆ

ಸಿ.ಐ.ಟಿ.ಯು. ರಾಜ್ಯಸಮಿತಿ ಪ್ರಧಾನ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪನವರು ತಾ. 22-5-81 ರಂದು ಮೈಸೂರಿನಲ್ಲಿ ಸಿ ಐ ಟಿ ಯು ಗೆ ಸೇರಿದ ಕಾರ್ಮಿಕ ಸಂಘಗಳ ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ಹಿತೈಷಿಗಳ ಸಭೆಯನ್ನುದ್ದೇಶಿಸಿ ಮಾತನಾಡುತ್ತ "ಕಾರ್ಮಿಕರು ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ನಾಗರೀಕ ಸ್ವಾತಂತ್ರ್ಯಗಳಿಗಾಗಿ ಐಕ್ಯತೆಯಿಂದ ಹೋರಾಡಬೇಕು" ಎಂದು ಕರೆ ನೀಡಿದರು.

"ಕಾರ್ಮಿಕ ಸಂಘಗಳು ಮತ್ತು ಹೋರಾಟ" ಎಂಬ ವಿಷಯದ ಮೇಲೆ ಮಾತನಾಡುತ್ತಿದ್ದ ಕಾಂ. ನಂಜುಂಡಪ್ಪನವರು ಭಾರತದ ಬಂಡವಾಳಗಾರರು ತಮ್ಮ ಅನುಕೂಲಕ್ಕಾಗಿ ಐ.ಎನ್.ಟಿ.ಯು.ಸಿ.ಯನ್ನು ರಚಿಸಿ-ಬೆಳಸಿದ ರೀತಿ ಮತ್ತು ಎ.ಐ.ಟಿ.ಯು.ಸಿ. ಮುಖಂಡರು ಕಾರ್ಮಿಕ ಸಂಘಗಳನ್ನು ಪ್ರಜಾಪ್ರಭುತ್ವ ರೀತಿಯಲ್ಲಿ ನಡೆಸದೆ ಬಂಡವಾಳಗಾರರಿಗೆ ಅನುಕೂಲಕರ ಧೋರಣೆಯನ್ನು ಅನುಸರಿಸಿದ್ದರಿಂದ ಎ.ಐ.ಟಿ.ಯು.ಸಿ.ಯಿಂದ ಹೊರಬಂದು ಸಿ.ಐ.ಟಿ.ಯು. ರಚನೆ ಮಾಡಿದ ಚಾರಿತ್ರಿಕ ಸಂದರ್ಭವನ್ನು ವಿವರಿಸಿದರು.

ಐಕ್ಯ ಹೋರಾಟ ಮತ್ತು ವರ್ಗ ಹೋರಾಟಗಳ ಸಿದ್ಧಾಂತದ ಆಧಾರದ ಮೇಲೆ ಸಿ.ಐ.ಟಿ.ಯು. ರಚನೆಯಾದ ನಂತರ ಐತಿಹಾಸಿಕ ರೈಲ್ವೆ ಮುಷ್ಕರ ನಡೆಸಲು ಸಾಧ್ಯವಾದದ್ದು, ಆಂತರಿಕ ತುರ್ತುಪರಿಸ್ಥಿತಿ, ಕಾಂಗ್ರೆಸ್ ಪಕ್ಷದ ಸೋಲು ಜನತಾ ಆಳ್ವಿಕೆ ಮತ್ತು ಪತನ, ಮತ್ತೆ ಕಾಂಗ್ರೆಸ್(ಐ) ಗೆಲವುಗಳ ಭಾರತದ ರಾಜಕಾರಣದ ಶೀಘ್ರ ಬೆಳವಣಿಗೆಗಳನ್ನು ಗುರುತಿಸಿದ ಕಾಂ. ಸಿ.ಎನ್.ರವರು "ಈ ಬೆಳವಣಿಗೆಗಳು ನಮಗೆ ಹೊಸ ಅನುಭವಗಳನ್ನು ತಂದುಕೊಟ್ಟಿವೆ". "ಐಕ್ಯ ಹೋರಾಟಗಳಲ್ಲಿ ಭಾಗವಹಿಸದಿದ್ದಲ್ಲಿ ತಮಗೆ ಉಳಿಗಾಲವಿಲ್ಲವೆಂದು ಭಾವಿಸಿ ಐ. ಎನ್. ಟಿ. ಯು. ಸಿ.ಯ ಗುಂಪುಗಳು, ಬಿ.ಎಂ.ಎಸ್. ನಂತಹ ಸಂಘಟನೆಗಳು ಐಕ್ಯ ಹೋರಾಟದಲ್ಲಿ ಭಾಗಿಗಳಾಗುತ್ತಿರುವುದು ಹೊಸ ಬೆಳವಣಿಗೆ" ಎಂದು ಹೇಳಿದರು.

ಕಾರ್ಮಿಕರು ಹೋರಾಟ ನಡೆಸುವಾಗ ಸಾರ್ವಜನಿಕ ಅಭಿಪ್ರಾಯವನ್ನು ಅವರ ವಿರುದ್ಧ ರೂಪಿಸುವ, ರೈತರು, ಹಳ್ಳಿಯ ಬಡವರು ಕೃಷಿ ಕಾರ್ಮಿಕರ ಎಲ್ಲಾ ಕಷ್ಟಗಳಿಗೆ ಪಟ್ಟಣದ ಕಾರ್ಮಿಕರೇ ಕಾರಣ ಎಂಬಂತೆ ಪ್ರಚಾರ ನಡೆಸುವ ಸಂಘಟಿತ ಕಾರ್ಮಿಕರ ವಿರುದ್ಧ ಅಸಂಘಟಿತ ಕಾರ್ಮಿಕರನ್ನು ಎತ್ತಿ ಕಟ್ಟುವ ಬಂಡವಾಳಗಾರರ ಕುತಂತ್ರಗಳ ಬಗ್ಗೆ ಎಚ್ಚರಿಸಿದರು.

ಬೆಂಗಳೂರಿನ ಮೈಕೊ ಕಾರ್ಮಿಕರ ಮೇಲೆ ಕಾಂಗ್ರೆಸ್ (ಐ) ಗೂಂಡಾಗಳು ಪೋಲೀಸರ ಸಹಾಯದೊಡನೆ ನಡೆಸಿರುವ ದಾಳಿ, ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಸಂಘಗಳ ಜಂಟಿ ಕ್ರಿಯಾರಂಗ ಮತ್ತು ಮೈಕೊ ಕಾರ್ಮಿಕ ಸಂಘಗಳ ಸಭೆಗೆ ಅನುಮತಿ ನಿರಾಕರಣೆಗಳನ್ನು ಉದಾಹರಿಸಿದ ಕಾಂ. ಸಿ. ಎನ್. ರವರು "1972-77ರ ಅವಧಿಯಲ್ಲಿ ಪಶ್ಚಿಮ ಬಂಗಾಳದಲ್ಲಿ ನಡೆದ ಅರೆ ಫ್ಯಾಸಿಸ್ಟ್ ದಬ್ಬಾಳಿಕೆ ಕರ್ನಾಟಕದಲ್ಲಿ ಪ್ರಾರಂಭವಾಗುವ ಸೂಚನೆಗಳು ಕಾಣಬರುತ್ತಿವೆ. ಕಾರ್ಮಿಕರು ವಿಶಾಲ ತಳಹದಿಯ ಐಕ್ಯತೆ ಸಾಧಿಸಿ, ರೈತರ ಸಖ್ಯತೆ ಬೆಳಸಿ, ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ನಾಗರೀಕ ಸ್ವಾತಂತ್ರ್ಯಗಳಿಗಾಗಿ ಹೋರಾಡಬೇಕು" ಎಂದು ಹೇಳಿದರು.

ಪ್ರಾರಂಭದಲ್ಲಿ ಕಾಂ. ಎಂ. ಎನ್. ಉಗ್ರಪ್ಪನವರು ಎಲ್ಲರನ್ನು ಸ್ವಾಗತಿಸಿದರು. ●

ಇದು ಸುಭದ್ರ ಸರಕಾರ!

ಬಡಜನತೆಯ ಮೇಲೆ, ಕಾರ್ಮಿಕರ ಮೇಲೆ ಏನೂ ಮಾಡಿ ದಕ್ಕಿಸಿಕೊಳ್ಳಬಹುದು ಈ ಕಾಂಗ್ರೆಸ್ ದರ್ಬಾರಿನಲ್ಲಿ. ನಿದರ್ಶನ ಬೇಕೆ? ಇಲ್ಲಿದೆ.

ಮಂಗಳೂರಿನ ಬೋಳಾರನಲ್ಲಿರುವ ಕೆನರಾ ಟೈಲ್ ವರ್ಕ್ಸ್‌ನ ಕಾರ್ಮಿಕರು, ಇಬ್ಬರು ಯೂನಿಯನ್ ಧುರೀಣರನ್ನು ಕೆಲಸದಿಂದ ಡಿಸ್‌ಮಿಸ್ ಮಾಡಿರುವುದನ್ನು ಪ್ರತಿಭಟಿಸಿ 16-5-81ರಿಂದ ಮುಷ್ಕರದಲ್ಲಿದ್ದಾರೆ.

ಕೆನರಾ ಟೈಲ್ ವರ್ಕ್ಸ್‌ನ. ಹೆಂಚು ಮತ್ತು ಇಟ್ಟಿಗೆ ಉತ್ಪಾದಕನಾದ ಜಯರಾಜ್ ಶೆಟ್ಟಿ ಎಂಬುವನು 19-5-1981ರಂದು ಹೆಂಚುಗಳನ್ನು ಲಾರಿ ಮೂಲಕ ಹೊರಸಾಗಿಸಲು ಯತ್ನಿಸಿದ. ಇದಕ್ಕೆ ಹೊರಗಿನ ಗೂಂಡಾಗಳನ್ನು ಸಹಾಯಕ್ಕೆ ಕರೆತಂದಿದ್ದನು. ಈ ಕೃತ್ಯವನ್ನು ಮುಷ್ಕರ ನಿರತ ಕಾರ್ಮಿಕರು ತಡೆಯಲೆತ್ನಿಸಿದರು. ಹುಚ್ಚೆದ್ದ ಜಯರಾಜ್ ಶೆಟ್ಟಿ ಮಾರಕಾಯುಧಗಳನ್ನು ತಂದು ಕಾರ್ಮಿಕರ ಮೇಲೆ ಹಲ್ಲೆಮಾಡಲೆತ್ನಿಸಿದನು. ಇದು ಸಾಲದೆಂಬಂತೆ ಡಬಲ್ ಬ್ಯಾರೆಲ್ ಬಂದೂಕು ತೆಗೆದುಕೊಂಡು ಗುಂಡುಹಾಕುತ್ತೇನೆಂದು ಬೆದರಿಕೆ ಹಾಕಿದನು.

ಬಾಡಿಗೆ ಗೂಂಡಾಗಳ ನೆರವಿನಿಂದ ಕಾರ್ಮಿಕರ ಮೇಲೆ ನಡೆದ ಹಲ್ಲೆಯಲ್ಲಿ ದೂಮಾ ಪೂಜಾರಿ ಎಂಬ ಕಾರ್ಮಿಕನು ತೀವ್ರ ಗಾಯಗೊಂಡು ಆಸ್ಪತ್ರೆಗೆ ಸೇರಿಸಲ್ಪಟ್ಟಿದ್ದಾನೆ. ಅನೇಕರು ಗಾಯಗೊಂಡಿದ್ದಾರೆ. ಈ ಗಲಭೆಯನ್ನು ಕಂಡು ಅಕ್ಕಪಕ್ಕದ ಕಾರ್ಖಾನೆಗಳ ಅನೇಕ ಕಾರ್ಮಿಕರು ಧಾವಿಸಿ ಗಲಭೆಯನ್ನು ತಡೆದರು.

ಯೂನಿಯನ್ ಪರವಾಗಿ ದ. ಕ. ಜಿಲ್ಲಾ ಪೋಲಿಸ್ ಅಧಿಕಾರಿಗೆ ದೂರು ಕೊಡಲಾಗಿದೆ. ಈ ಅಮಾನುಷ ಕೃತ್ಯವನ್ನು ದ.ಕ. ಜಿಲ್ಲಾ ಸಿ.ಐ.ಟಿ.ಯು. ಕಾರ್ಯದರ್ಶಿ ಕಾಂ. ಕೆ. ಮೂಸಬ್ಬ ಉಗ್ರವಾಗಿ ಖಂಡಿಸಿರುವರಲ್ಲದೇ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಂಬಂಧಪಟ್ಟ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ. ●

ಟಿ. ಎ. ಪೈ ನಿಧನ

ಮಾಜೀ ರೈಲ್ವೆ, ಕೈಗಾರಿಕೆ ಮಂತ್ರಿಗಳಾಗಿದ್ದ ಶ್ರೀ ಟಿ. ಎ. ಪೈ ರವರು 29-5-81ರಂದು ಬೆಳಿಗ್ಗೆ ಮಣಿಪಾಲದಲ್ಲಿ ಹೃದಯಾಘಾತದಿಂದ ನಿಧನರಾಗಿರುವರು.

ಶ್ರೀ ಟಿ. ಎ. ಪೈಯವರ ನಿಧನಕ್ಕೆ ಐಕ್ಯರಂಗ ತನ್ನ ಸಂತಾಪ ವ್ಯಕ್ತಪಡಿಸುತ್ತದೆ.

ಲೋಕೋಪಯೋಗಿ ಇಲಾಖೆ ಕಾರ್ಮಿಕರ ಹೋರಾಟ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ದಿನಗೂಲಿಗಳಾಗಿ ಕೆಲಸ ಮಾಡುವವರು ರಾಜ್ಯದಾದ್ಯಂತ ಸುಮಾರು 25,000 ದಷ್ಟಿದ್ದಾರೆ. ಡ್ರೈವರ್ಸ್, ಮೆಕಾನಿಕ್, ಹೆಲ್ಪರ್, ಕ್ಲೀನರ್, ಲಿಟರೇಟ್ ಮಜ್ದೂರ, ಕಾರಸೆಂಟಲ್ ಗ್ಯಾಂಗ್‌ಮನ್, ಕುಕ್ಕರ್ ಆಪರೇಟರ್ಸ್ ಮುಂತಾದ ಕೆಲಸ ಮಾಡುತ್ತಿದ್ದಾರೆ. ಇವರಲ್ಲಿ ಒಂದು ವರ್ಷದಿಂದ ಹಿಡಿದು ಹದಿನೈದು ವರ್ಷಗಳ ಅವಧಿಯಿಂದ ದಿನಗೂಲಿಗಳಾಗಿ ದುಡಿಯುತ್ತಾ ಬಂದಿದ್ದಾರೆ. ಇವರಿಗೆ ಸಿಗುವ ದಿನಗೂಲಿ 6ರೂ.ಗಳು ಮಾತ್ರ ಇತರ ಯಾವ ಸೌಲಭ್ಯಗಳೂ ಇವರಿಗೆ ಸಿಗುವುದಿಲ್ಲ. ಕೆಲಸಕ್ಕೆ ಹೋದ ದಿನ ಮಾತ್ರ ಕೂಲಿ ದೊರೆಯುವುದು.

ಅನೇಕ ವರ್ಷಗಳಿಂದ ಸರಕಾರಕ್ಕೆ ಮನವಿ ಸಲ್ಲಿಸುತ್ತಾ, ಬೇಡಿಕೆಗಳನ್ನು ಮುಂದಿಡುತ್ತಾ ಬಂದಿದ್ದರೂ ಫಲ ದೊರೆತಿಲ್ಲ. ಘನ ಸರಕಾರ ನಿಗದಿಪಡಿಸಿದ ಕನಿಷ್ಠ ಕೂಲಿ ಸಹ ಇವರಿಗೆ ದೊರಕುತ್ತಿಲ್ಲ. ಬಂಗಾರಪ್ಪ ಲೋಕೋಪಯೋಗಿ ಮಂತ್ರಿಯಾಗಿದ್ದಾಗ ಈ ಕಾರ್ಮಿಕರ ನೌಕರಿಯನ್ನು ಖಾಯಂಗೊಳಿಸುವದಾಗಿ ವಿಧಾನ ಪರಿಷತ್ತಿನಲ್ಲಿ ಹೇಳಿಕೆ ಕೊಟ್ಟಿದ್ದರು. ಅದೂ ಕಾರ್ಯಗತವಾಗಿಲ್ಲ.

ಸರಕಾರದ ನೀತಿಯನ್ನು ಪ್ರತಿಭಟಿಸಿ ಆಗಾಗ ಅಲ್ಲಲ್ಲಿ ಮುಷ್ಕರಗಳು ನಡೆಯುತ್ತಾ ಬಂದಿವೆ. ಸರಕಾರ ಗಮನಿಸಿಲ್ಲ. ಅನಿವಾರ್ಯವಾಗಿ ರಾಯಚೂರು ಜಿಲ್ಲೆಯಲ್ಲಿ ಹೋರಾಟ ಪ್ರಾರಂಭವಾಗಿದೆ. 1-5-81ರಂದು ರಾಯಚೂರಲ್ಲಿ ಸರದಿ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದ್ದಾರೆ. ಹೋರಾಟ ರಾಜ್ಯದ ಇತರ ಕಡೆಗೂ ಪ್ರಸರಿಸುವ ನಿರೀಕ್ಷೆ ಇದೆ.

ರಾಜ್ಯದ ಇತರ ಭಾಗಗಳಲ್ಲಿ ಕೆಲಸ ಮಾಡುತ್ತಿರುವ ಲೋಕೋಪಯೋಗಿ ಇಲಾಖೆಯ ಕಾರ್ಮಿಕರು ಈ ಹೋರಾಟವನ್ನು ಬೆಂಬಲಿಸಬೇಕೆಂದು ರಾಯಚೂರಿನ ಕರ್ನಾಟಕ ಲೋಕೋಪಯೋಗಿ ಇಲಾಖೆಯ ದಿನಗೂಲಿಗಳ ಫೆಡರೇಷನ್ನಿನ ಅಧ್ಯಕ್ಷರಾದ ಕಾಂ. ಎಚ್. ಗೋವಿಂದರೆಡ್ಡಿ ವಿನಂತಿಸಿದ್ದಾರೆ. ●

ರಿಯಾಯಿತಿ ದರದಲ್ಲಿ ಪ್ರಗತಿಪರ ಪುಸ್ತಕ ಪಡೆಯಲು

"ಕ್ರಿಯಾ ಪುಸ್ತಕಾಲಯಕ್ಕೆ ಭೇಟಿನೀಡಿರಿ"

ದೇಶದ ಬೇರೆಬೇರೆ ಪ್ರಗತಿಪರ ಪ್ರಕಾಶನ ಸಂಸ್ಥೆಗಳಿಂದ ಪ್ರಕಟಿತವಾಗಿರುವ ಪ್ರಗತಿಪರ ಪುಸ್ತಕಗಳು, ರಷ್ಯಾ ದೇಶ ಮತ್ತು ಚೈನಾ ದೇಶದ ಸಾಹಿತ್ಯ ಮತ್ತು ಪ್ರಕಟಣೆಗಳು ಹಾಗೂ ಮಕ್ಕಳಿಗಾಗಿ ಪುಸ್ತಕಗಳು ಹೊಸತಾಗಿ ಆಗಮಿಸಿವೆ.

ಕ್ರಿಯಾ ಪ್ರಕಾಶನ (ಪ್ರೈ) ಲಿಮಿಟೆಡ್
24, ಡಬ್ಲ್ಯು. ಹೆಚ್. ಹನುಮಂತಪ್ಪ ರಸ್ತೆ,
ಗಾಂಧಿನಗರ,
ಬೆಂಗಳೂರು-560 009

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053, Editorial and managerial office: L-56, K. V. Temple Street, Sultanpet Bangalore-560 053. Phone-24154
EDITOR: M. K. BHAT